# ಸೃಷ್ಟಿ ಮತ್ತು ನಾಶ

## ಪಾಠ–1

ಎಲೋಹಿಂ(**elohiym(elo-heem)**)ಎನ್ನುವ ಪದವು ಎಲೋವಹ(**elowahh**)ಎಂಬ ಪದದ ಬಹುವಚನ ರೂಪ.

ಅದು ದೇವರು (**God**) ಎಂದು ಇಂಗ್ಲೀಷನಲ್ಲಿ ಭಾಷಾಂತರ ಮಾಡಲಾಗಿದೆ. ಭೂಮಿ, ಆಕಾಶಗಳನ್ನು ಉಂಟುಮಾಡುವಾಗ ತಂದೆ, ಮಗ,ಪರಿಶುದ್ಧಾತ್ಮ ಏಕೀಬವಿಸಿದ್ದರು. “ಆದಿಯಲ್ಲಿ ದೇವರು ಭೂಮಿ ಆಕಾಶವನ್ನು ಉಂಟುಮಾಡಿದನು ಭೂಮಿಯು ಕ್ರಮವಿಲ್ಲದೆಯೂ ಬರಿದಾಗಿತ್ತು; ಆದಿ ಸಾಗರದ ಮೇಲೆ ಕತ್ತಲಿತ್ತು; ದೇವರಾತ್ಮವು ಜಲ ಸಮೂಹದ ಮೇಲೆ ಚಲಿಸುತ್ತಿತ್ತು. ಆಗ ದೇವರು ಬೆಳಕಾಗಲಿ ಅನ್ನಲು ಬೇಳಕಾಯಿತು”(ಆದಿ1:1–3).“ಆದಿಯಲ್ಲಿ ವಾಕ್ಯವಿತ್ತು; ಆ ವಾಕ್ಯವು ದೇವರ ಬಳಿಯಲ್ಲಿತ್ತು; ಆ ವಾಕ್ಯವು ದೇವರಾಗಿತ್ತು. ಆ ವಾಕ್ಯವೆಂಬುವವನು ಆದಿಯಲ್ಲಿ ದೇವರ ಬಳಿಯಲ್ಲಿದ್ದನು ಆತನ ಮೂಲಕವಾಗಿ ಸಮಸ್ತವು ಉಂಟಾಯಿತು; ಉಂಟಾಗಿರುವ ವಸ್ತುಗಳಲ್ಲಿ ಆತನಿಲ್ಲದೆ ಒಂದಾದರೂ ಉಂಟಾಗಲಿಲ್ಲ”(ಯೋಹಾನ1:1–3).ಹೀಗೆ ಪ್ರಾರಂಭವನ್ನು ಕುರಿತು ದೇವರು ಮನುಷ್ಯನಿಗೆ ಯಾವುದನ್ನು ತಿಳಿಸಿದ್ದಾನೂ ಅದು ಮಾತ್ರಗೊತ್ತು ಆದರೆ ಮೇಧಾವಿಗಳ ಸಿದ್ಧಾಂತಗಳು ಸಂಪೂರ್ಣವಾಗಿ ತಿಳಿಸಲಿಲ್ಲ.ಮತ್ತು ಅವರು ತಿಳಿಸಿರುವ ವಿಷಯಗಳು ದೇವರು ತಿಳಿಸಿರುವ ವಿಷಯಗಳಿಗೆ ಭಿನ್ನವಾಗಿವೆ.

ಸೃಷ್ಟಿಯನ್ನು ಉಂಟುವಾಡುವಲ್ಲಿ ಕೊನೆಯ ದಿನ,ಅಂದರೆ “ಆ ಮೇಲೆ ದೇವರು ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟುಮಾಡೋಣ;ಅವರು ಸಮುದ್ರಗಳಲ್ಲಿರುವ ಮೀನುಗಳ ಮೇಲೆಯೂ ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳ ಮೇಲೇಯೂ ಪಶುಗಳ ಮೇಲೆಯೂ ಹರಿದಾಡುವ ಕ್ರಿಮಿ ಕೀಟಗಳ ಮೇಲೆಯೂ ಎಲ್ಲಾ ಭೂಮಿಯ ಮೇಲೆಯೂ ದೊರೆತನ ಮಾಡಲಿ ಅಂದನು”(ಆದಿ1:26–27).ದೇವರು ಉಂಟು ಮಾಡಿದ ಸೃಷ್ಟಿ ಕಾರ್ಯದಲ್ಲೇ ಇದು ಭಿನ್ನವಾಗಿದೆ(ಮನುಷ್ಯನನ್ನು ಉಂಟುಮಾಡಿದ್ದು)ಹೇಗೆಂದರೆ ಮನುಷ್ಯನ್ನು ಆತನ ಸ್ವರೂಪದಲ್ಲಿ ತನ್ನ ಹೋಲಿಕೆಗೆ ಸರಿಯಾಗಿ ಉಂಟುಮಾಡಿದನು ಆದರೆ ಮನುಷ್ಯನು ದೇವರ ನಿಖರವಾದ ನಕಲು ಅಲ್ಲ. ಅಲ್ಲಿ ಮನುಷ್ಯನು ರಕ್ತ ಮಾಂಸದಲ್ಲಿ ಉಂಟುಮಾಡಲ್ಪಟ್ಟನು ಆದರೆ ದೇವರು ಆತ್ಮಸ್ವರೂಪಿಯಾಗಿದ್ದಾನೆ.

ದೇವರು ತನ್ನ ಸೃಷ್ಟಿಯಲ್ಲೆಲ್ಲಾ ಇವನನ್ನು ಮದ್ಯದಲ್ಲಿರಿಸಿ ಎಲ್ಲಾ ಭೂಮಿಯ ಮೇಲೆ ದೊರೆತನ ನಡೆಸಲಿ ಅಂದನು.ಮತ್ತು ಯೆಹೋವ "ದೇವರು ಆ ಮನುಷ್ಯನ್ನು ಕರೆದುಕೊಂಡು ಹೋಗಿ ಏದೇನ್ ತೋಟವನು ವ್ಯವಸಾಯ ಮಾಡುವುದಕ್ಕೂ ಅದರಲ್ಲಿ ಇಟ್ಟನು. ಇದಲ್ಲದೆ ಯಥೇಚ್ಛವಾಗಿ ತಿನ್ನಬಹುದು;ಒಳ್ಳೇದರ ಕೆಟ್ಟದರ ಅರಿವನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು;ತಿಂದರೆ ಸತ್ತೇ ಹೋಗುವಿ ಎಂದು ಹೇಳಿದನು:(ಆದಿ2:16–17).

"ಆಗ ಸ್ತ್ರೀಯು– ಆ ಮರದ ಹಣ್ಣನ್ನು ತಿನ್ನುವುದಕ್ಕೆ ಉತ್ತಮವಾಗೂ ನೋಡುವುದಕ್ಕೆ ರಮ್ಯವಾಗಿಯೂ ಜ್ಞಾನೋದಯಕ್ಕೆ ಅಪೇಕ್ಷಿಸತಕ್ಕದ್ದಾಗಿದೆ ಎಂದು ತಿಳಿದು ತೆಗೆದುಕೊಂಡು ತಿಂದಳು ಸಂಗಡ ಇದ್ದ ಗಂಡನಿಗೂ ಕಡಲು ಅವನೂ ತಿಂದನು"(ಆದಿ3:6).

"ಆದರೆ ಪ್ರತಿಯೊಬ್ಬನು ತನ್ನಲಿರುವ ಆಶಾಪಾಶದಿಂದ ಸೆಳೆಯಲ್ಪಟ್ಟು ಮರುಳು ಗೊಂಡವನಾಗಿ ಪ್ರೇರೆಪಿಸಲ್ಪಡುತ್ತಾನೆ ಆ ಮೇಲೆ ಆಶೆಯು ಬಸುರಾಗಿ ಪಾಪವನ್ನು ಹಡೆಯುತ್ತದೆ;ಪಾಪವು ತುಂಬಾ ಬೆಳೆದು ಮರಣವನ್ನು ಹಡೆಯುತ್ತದೆ "(ಯಾಕೋಬ1:14–15).ಆ ಹಣ್ಣನ್ನು ಅವ್ವ ತಿನ್ನುವುದಕ್ಕೆ ಉತ್ತಮವಾಗಿಯೂ ನೋಡುವುದಕ್ಕೆ ರಮ್ಯವಾಗಿಯೂ ಜ್ಞಾನೋದಯಕ್ಕೆ ಅಪೇಕ್ಷಿಸುವಂತದ್ದಾಗಿದೆ ಎಂದು ಗ್ರಹಿಸಿದಳು ಆದರೆ ಅವರ ಅವೀಧೆಯತೆಯಿಂದ ಜೀವನ ಪರಿಯಂತ ಅವಿಧೇಯತೆಯಿಂದ ಬಂದ ಫಲವನ್ನು ಅನುಭವಿಸುವ ಪರಿಸ್ಥಿತಿ ಎದುರಾಯಿತು.

ಕೆಲವು ಸಂದರ್ಭಗಳಲ್ಲಿ ದೇವರ ತೀರ್ಪನ್ನು ದಿಕ್ಕರಿಸಿದಾಗ ಅಥವಾ ವಿರೋಧಿಸಿದಾಗ ಒಬ್ಬನಿಗೆ ಆ ಪಾಪದ ಅರಿವು ಕಂಡುಬರುತ್ತದೆ.ಆದ್ದರಿಂದ ಆದಾಮ ಮತ್ತು ಅವ್ವಳು ಪರಲೋಕದಂತಹ ಸ್ಥಳವಾದ ಏದೇನ್ ತೋಟದಿಂದ ಹೊರಗೆ ಹಾಕಲ್ಪಟ್ಟರು. ಅವರನ್ನು ಕಷ್ಟ,ದುಃಖಗಳು ಇರುವಲ್ಲಿಗೆ ಕಳೂಹಿಸಲಾಯಿತು.

ಈ ಮೊದಲ ಮನುಷ್ಯರ ಆಜ್ಞಾತೀಕ್ರಮವು ಅಂದರೆ ಪಾಪದಿಂದ ಮಾನವ ಪತನ(ನಾಶ)ಪ್ರಾರಂಭವಾಯಿತು.ಹಣ್ಣು ತಿಂದರ ಸತ್ತೇ ಸಾಯುವಿ ಎಂದು ದೇವರು ಹೇಳಿದ ಮಾತಿಗೆ ಅವರು ತಿಂದ ಕೊಡಲೇ ದೇವರ ಹೋಲಿಕೆಯಿಂದ ಆತ್ಮೀಯ ಜೀವಹೊಂದದೆ ಮರಣಿಸಿದರು. ಆದ್ದರಿಂದ "ದೇವರಾದ ಯೆಹೋವನು ಸರ್ಪಕ್ಕೆ ನೀನು ಇದನ್ನು ಮಾಡಿರಿಂದ ಪಶುಗಳೆಲ್ಲವುಗಳಲ್ಲಿ, ಭೂಜಂತುಗಳೆಲ್ಲವುಗಳಲ್ಲಿಯೂ ನೀನು ಶಾಪಗ್ರಸ್ಥನಾಗಿ ನಿನ್ನ ಹೊಟ್ಟೆಯಿಂದ ನಡೆಯುತ್ತಾ ನೀನು ಮಣ್ಣನ್ನೇ ತನ್ನುವಿ ಮತ್ತು ನಿನ್ನ ಸಂತಾನಕ್ಕೂ ಈ ಸ್ತ್ರೀ ಸಂತಾನಕ್ಕೂ ಹಗೆತನ ವಿರುವ ಹಾಗೆ ಮಾಡುವೆನು. ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವುದು, ನೀನು ಅದರ ಹಿಮ್ಮಡಿಯನ್ನು ಕಚ್ಚುವಿ. ಆ ಮೇಲೆ ಸ್ತ್ರೀಗೆ–ನೀನು ಗರ್ಭಿಣೆಯಾಗಿರುವ ಕಾಲದಲ್ಲಿ ಬಹು ಸಂಕಟ ಪಡಬೇಕೆಂದು ನಾನು ನೇಮಿಸಿದ್ದೇನೆ; ಕಷ್ಟದಿಂದಲೇ ಮಕ್ಕಳನ್ನು ಹೆರುವಿ;ಗಂಡನ ಮೇಲೆ ನಿನಗೆ ಆಶೆಯಿರುವುದು;ಅವನು ನಿನಗೆ ಒಡೆಯನಾಗಿರುವನು ಎಂದು ಹೇಳಿದನು.

ಪರುಷನಿಗೆ ಆಜ್ಞಾಪಿಸಿದ ಮರದ ಫಲವನ್ನು ನಿನ್ನ ಹೆಂಡತಿಯ ಮಾತು ಕೇಳಿ ತಿಂದ ಕಾರಣ ನಿನ್ನ ನಿಮಿತ್ತ ಭೂಮಿಗೆ ಪಾಪ ಬಂತು. ನಿನ್ನ ಜೀವಮಾನವೇಲ್ಲಾ ದುಡಿದು ದುಡಿದು ಭೂಮಿಯ ಹುಟ್ಟುವಳಿಯನ್ನು ತಿನ್ನಬೇಕು. ಆ ಭೂಮಿಯಲ್ಲಿ ಮುಳ್ಳು ಗಿಡಗಳೂ ಕಳೆಗಳೂ ಬಹಳವಾಗಿ ಹುಟ್ಟುವವು. ಹೊಲದ ಬೆಳೆಯನ್ನು ಅನುಭವಿಸುವಿ. ನೀನು ತಿರಿಗಿ ಮಣ್ಣಿಗೆ ಸೇರುವ ತನಕ ಬೆವರಿಡುತ್ತಾ ಬೇಕಾದ ಆಹಾರವನ್ನು ಸಂಪಾದಿಸಿಸಬೇಕು. ನೀನು ಮಣ್ಣೇ; ಪುನಃ ಮಣ್ಣಿಗೆ ಸೇರತಕ್ಕವನಾಗಿದ್ದೀ ಎಂದು ಹೇಳಿದನು"(ಆದಿ3:14–19).

ಈ ಪಾಠ ದಿಂದ ಆದಾಮನು, ಅವ್ವಳು ಇವರು ದೇವರಿಂದ ಬೇರೆ ಮಾಡಲ್ಪಟ್ಟರು ಮತ್ತು ದೇವರೊಂದಿಗೆ ಸಮಾಧಾನ ಹೊಂದುವ ಪರಿಸ್ಥಿತಿಯನ್ನು ತಂದುಕೊಂಡರು. ಅವರ ಅವೀಧೆಯತೆಯಿಂದ ಪಾಪ ಪರಿಹಾರಕ್ಕೆ ಪರಿಪೂರ್ಣವಾದ ಬಲಿ ಅವಶ್ಯಕವಾಯಿತು.ಆದ್ದರಿಂದ ಮೊದಲ ಮನುಷ್ಯರ ಮೊದಲ ಅವಿಧೇಯತೆಯ ತಪ್ಪಿನಿಂದ ಬಂದ ಪಾಪವು ಮನುಕುಲಕ್ಕೆ ಶಾಪವಾಗಿ ರೂಪುತಾಳಿತು ಮತ್ತು ಮನುಷ್ಯರೆಲ್ಲರೂ ದೇವರೊಂದಿಗೆ ಪುನಃ ಒಂದಾಗುವುದಕ್ಕೆ ಒಂದು ಪರಿಶುದ್ಧವಾದ, ಪರಿಪೂರ್ಣವಾದ ಬಲಿಯು ಅವಶ್ಯಕವಾಗಿತು.

ಪ್ರಶ್ನೆಗಳು:

1.ಒಳ್ಳೆದರ ಹಾಗು ಕೆಟ್ಟದರ ಅರಿವನ್ನುಹುಟ್ಟಿಸುವ ಮರದ ಹಣ್ಣನ್ನು ತಿನ್ನಬಾರದು ಎಂದು ಮಾತ್ರ ದೇವರು ಹೇಳಿದ್ದನು.

**A.**ಸರಿ **B.**ತಪ್ಪು

2.ಆದಾಮನಂತೆ ಆತನ ಮೂಲಕ ಸೃಷ್ಟಿಸಲ್ಪಟ್ಟ ಮನುಷ್ಯರೇಲ್ಲರೂ.

**A.**ಸರಿಯಾಗಿ ದೇವರಂತವರು

**B.**ದೇವರ ಉಸಿರು ತೆಗೆದುಕೊಂಡ ಜೀವಿಗಳು

**C.**ದೇವರ ಸ್ವರೂಪದಲ್ಲಿರುವವರು

3.ಒಳ್ಳೆ,ಕೆಟ್ಟದರ ಅರಿವನ್ನು ಹುಟ್ಟಿಸುವುದರ ಮರದ ಹಣ್ಣನ್ನು ತಿನ್ನ ಬಾರದು ಎಂದು ಅವ್ವಳಿಗೆ ಗೊತ್ತಿರಲಿಲ್ಲ.

**A.**ಸರಿ **B.**ತಪ್ಪು

4.ತನ ಸ್ವರೂಪದಲ್ಲಿ ಉಂಡುಮಾಡಲ್ಪಟ್ಟ ಮನುಷ್ಯರು ಅವಿಧೇಯರಾದಾಗ ದೇವರು ಅವರ ನಿಮಿತ್ತ ಮನಸ್ಸು ನೊಂದು ಕೊಂಡನು.

**A.**ಸರಿ **B.**ತಪ್ಪು

5. ಅವ್ವಳು ತಿನ್ನ ಬಾರದು ಎಂದು ಹೇಳಿದ ಹಣ್ಣನ್ನು ತಿನ್ನು ಎಂದು ಹೇಳಿದಾಗ ತನಗೋಸ್ಕರ ಆಕೆಯನ್ನು ದೇವರು ಉಂಟುಮಾಡಿದ್ದರಿಂದ ಆದಾಮನಿಗೆ ಬೇರೆ ಮಾರ್ಗ ತೋಚಲಿಲ್ಲ.

**A.**ಸರಿ **B.**ತಪು

***

## ಮೊದಲನೇ ಮಾನವರು

## (ಆದಿಕಾಂಡ4–6)

### ಪಾಠ–2

ಒಳ್ಳೆದರ ಕೆಟ್ಟದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು ಎಂದು ದೇವರು ಅವರಿಗೆ ಕೊಟ ಮೊದಲ ಆಜ್ಞೆ.ದೇವರ ಸೃಷ್ಟಿಯಲ್ಲಿ ಮೊದಲ ಮನುಷ್ಯರು ಆದಾಮ,ಅವ್ವಳು ಆ ಆಜ್ಞೆ ಅವ್ವಳಿಗೆ ಗೊತ್ತಿದ್ದರು ಪ್ರೇರೇಪಣೆಯಿಂದ ಕೊಡಲ್ಪಟ್ಟ ಆ ಹಣ್ಣನ್ನು ತಿಂದಳು ಮತ್ತು ತನ್ನ ಸಂಗಡ ಇದ್ದ ಆದಾಮನಿಗೂ ಕೊಟ್ಟಳು. ಆತನು ಸಹ ತಿಂದನು. ಸರ್ಪದ ರೊಪದಲ್ಲಿ ಇದ್ದ ಸೈತಾನನು ಪಾಪ ಮಾಡುವಂತೆ ಅವರಿಗೆ ಪ್ರೇರೇಪಿಸಿದನು. ಈ ಅವೀಧೆಯತೆಯಿಂದ ಪರಲೋಕದಂತಹ ಏದೇನು ತೋಟದಿಂದ ಹೊರಗೆ ಹಾಕಲ್ಪಟ್ಟರು ಮತ್ತು ಪಾಪದಿಂದ ಅನೇಕ ಶೋಧನೆಗಳ ಪರಿಣಾಮಗಳನ್ನು ಅವರು ಅನುಭವಿಸಿದರು.ಈ ಕಾರಣದಿಂದ ಅವರನ್ನು ದೇವರಿಂದ ಬೇರೆಮಾಡಲ್ಪಟ್ಟು ಕಷ್ಟ ಮತ್ತು ಮರಣವು ಅವರಿಗೆ ಉಂಟಾಯಿತು.

ಮೊದಲ ಕುಟುಂಬದಲ್ಲಿ ಅವರಿಗಾದ ಅತೀ ದೊಡ್ಡ ಕಷ್ಟ ಯಾವುದೆಂದರೆ ಅವರ ಸಂತಾನದ ಮೊದಲ ಗಂಡು ಮಕ್ಕಳಲ್ಲಿ ಒಬ್ಬನಾದ ಕಾಯಿನನ ಹೃದಯವು ದೈವಿಕವಾಗಿಯೊ,ಪರಿಶುದ್ಧವಾಗಿಯೊ ಇರಲಿಲ್ಲ ಎಂದು ಗೊತ್ತಾಗುತ್ತದೆ.ಮತ್ತು ಪಾಪವು ಅವನಲ್ಲಿ ಇದೆ ಎಂದು ಗೊತ್ತಾಗುತ್ತದೆ.ಕಾಯಿನನು ಮತ್ತು ಹೇಬೆಲನು ದೇವರಿಗೆ ಕಾಣಿಕೆಗಳನ್ನು ಸಮರ್ಪಿಸಿದರು ಹೇಬೆಲನ ಕಾಣಿಕೆಯನ್ನು ದೇವರು ಮೆಚ್ಚಿದನು.ಅದರೆ ಕಾಯಿನಲ್ಲಿ ಪಾಪವು ಇರುವುದರಿಂದ ಆತನ ಕಾಣಿಕೆನ್ನು ಮೆಚ್ಚದೆ ಹೋದದ್ದರಿಂದ ಕಾಯಿನನು ಕೋಪಗೊಂಡನು.

<u>ಕಾಯಿನನು ಮತ್ತು ಹೇಬೆಲನು:</u>

ಹೇಬೆಲನು ಕಾಯಿನನಿಗಿಂತ ಶ್ರೇಷ್ಠವಾದ ಕಾಣಿಕೆಯನ್ನು ದೇವರಿಗೆ ಸರ್ಮಪಿಸಿದನು "ವಿಧೇಯತೆಯು,ಪ್ರೀತಿ ವಿಶ್ವಾಸಕ್ಕೆ ಅಧಾರವಾಗಿದೆ.ಆದ್ದರಿಂದ ಹೇಬೇಲನ ಕ್ರಿಯೆಗಳು ಮತ್ತು ಪ್ರರ್ವತನೆ ದೇವರಿಗೆ ಮೆಚ್ಚಿಕೆಯಾಯಿತು. ಆದರೆ ಕಾಯಿನನ ಕ್ರಿಯೆಗಳು,ಪ್ರರ್ವತನೆಗಳು ದೇವರಿಗೆ ಇಷ್ಟವಾಗಲಿಲ್ಲ.ಅದ್ದರಿಂದ ಕಾಯಿನನು ಸಮರ್ಪಿಸಿದಾಗ ಕಾಯಿನನಿಗೆ ದೇವರು ಹೀಗೆ ಹೇಳಿದನು "ಒಳ್ಳೆ ಕೆಲಸ ಮಾಡಿದರೆ ನಿನ್ನ ತಲೆ ಎತ್ತಲ್ಪಡುವುದಲ್ಲವೇ;ಅಲ್ಲದಿದ್ದರೆ ಪಾಪವು ನಿನ್ನನ್ನು ಹಿಡಿಯಬೇಕೆಂದು ಬಾಗಿಲಲ್ಲಿ ಹೊಂಚುಕೊಂಡಿರುವದು; ಅದರೂ ನೀನು ಅದನ್ನು ವಶಮಾಡಿಕೊಳ್ಳಬೇಕು ಎಂದು ಹೇಳಿದನು"(ಆದಿ4:7).

ಆದ್ದರಿಂದ ಕಾಯಿನನು ಅರ್ಪಿಸಿದ ಕಾಣಿಕೆ ಅಥವಾ ಪ್ರರ್ವತನೆ ಎರಡನ್ನು ಅಂಗೀಕರಿಸಲಿಲ್ಲ ಎನ್ನುವುದು ಇಲ್ಲಿ ಕಂಡುಬರುತ್ತದೆ. ತನ್ನಲ್ಲಿರುವುದರಲ್ಲಿ ಶ್ರೇಷ್ಟವಾದದ್ದನ್ನು ಸಮರ್ಪಿಸದೆ ಇರಬಹುದು ಇಲ್ಲ ಆಜ್ಞಾಪಿಸಿದನ್ನು ಅರ್ಪಿಸಿರಬಹುದು, ಆದರೆ ದೇವರ ಪ್ರೀತಿ ಇಲ್ಲದೆ ಇವುಗಳನ್ನು ಮಾಡಿರಬಹುದು ಆದ್ದರಿಂದ ಅದು ಯಾವರೀತಿಯ ಕಾರ್ಯವಾದರೂ ಸಹ ದೇವರು ಅವುಗಳಿಂದ ಸಂತೋಷ ಪಡಲಿಲ್ಲ ದೇವರು ಅದನ್ನು ಯಾಕೆ ಅಂಗೀಕರಿಸಲಿಲ್ಲೊ ಕಾಯಿನನಿಗೆ ಗೊತ್ತಿರುತ್ತದೆ. ಇದರಿಂದ ಆತನಿಗೆ ಬಂದ ಫಲಿತಾಂಶವೇನೆಂದರೆ ವ್ಯವಸಾಯ ಭೂಮಿ ಬೆಳೆಯದೆ ಮತ್ತು ಭೋಲೋಕದಲ್ಲಿ ಅಲೆಯುವವನೂ,ದೇಶಭ್ರಷ್ಟನೂ ಆದನು. ಇದೇ ಅತನಿಗೆ ದೇವರು ಕೊಡಲ್ಪಟ್ಟ ಶಿಕ್ಷೆ.

<u>ನೋಹಾನನು:</u>

ನೋಹಾನನು ನೀತಿವಂತನು ತನ್ನ ಕಾಲದವರಲ್ಲಿ ತಪ್ಪಿಲ್ಲದವನೂ ಆಗಿದ್ದನು. ಮುಂದೆ ಆಗುವ ಜಲಪ್ರಳಯದಿಂದ ನೀತಿವಂತರಾದ ಜನರನ್ನು ಹೇಗೆ ರಕ್ಷಿಸಬೇಕೆಂದು ದೇವರು ನೋಹಾನನಿಗೆ ತಿಳಿಸಿದನು. ನಾವೆಯನ್ನು ಮಾಡಿಕೊ ಎಂದು ಹೇಳಿ ಅದರ ಸೂಚನೆಗಳು,ನಿಯಮಗಳು ಅಸಾಧಾರಣವಾದವುಗಳು ಆದರೂ ಸ್ಪಷ್ಟವಾದವುಗಳು.ಒಂದೇ ರೀತಿಯಾದ ತುರಾಯಿ ಮರದಿಂದ ಮಾಡಿದ ನಾವೆಯು ಬಹಳ ಉದ್ದ,ಅಗಲ ಮತ್ತು ಎತ್ತರ ಇದ್ದು ಒಂದೇ ಕಿಟಕಿ,ಮತ್ತು ಒಂದೇ ಬಾಗಿಲು ಇರುವ ಒಂದು ನಾವೆಯನ್ನು ಆತನೂ ಆತನ ಕುಟುಂಬವು ಹೇಗೆ ಕಾಪಾಡಿಕೊಳ್ಳಬೇಕು ಎಂದು ಅತನು ದೇವರನ್ನು ಕೇಳಿರಬಹುದು (ಆದಿ6:15–18).

ನೋಹಾನನು ದೇವರು ಹೇಳಿದಂತೆ ನಾವೆಯನ್ನು ಕಟ್ಟಲು ಪ್ರಾರಂಭಿಸಿದನು.ತನ್ನ ಕಾಲದಲ್ಲಿನ ಜನರ ಎದುರು ಬೀಳುವ ತತ್ವಕ್ಕೆ ಮತ್ತು ಪಾಪದಿಂದ ಕೂಡಿದ ಜೀವನ ಶೈಲಿಯನ್ನು ಕುರಿತು ನೋಹಾನನು ಅವರನ್ನು ಎಚ್ಚರಿಸಿದನು. “ನಂಬಿಕೆಯಿಂದಲೇ ನೋಹಾನನು ಅದುವರೆಗೂ ಕಾಣದಿದ್ದ ಸಂಗತಿಗಳ ವಿಷಯವಾಗಿ ದೈವೋಕ್ತಿಯನ್ನು ಹೊಂದಿ ಭಯ ಭಕ್ತಿಯುಳ್ಳವನಾಗಿ ತನ್ನ ಮನೆಯವರ ರಕ್ಷಣೆಗೋಸ್ಕರ ನಾವೆಯನ್ನು ಕಟ್ಟಿ ಸಿದ್ದ ಮಾಡಿದನು”(ಇಬ್ರಿಯ11:7). ಆದ್ದರಿಂದ ಲೋಕದವರನ್ನು ದಂಡನೆಗೆ ಪಾತ್ರರೆಂದು ನಿರ್ಣಯಿಸಿಕೊಂಡು ನಂಬಿಕೆಗೆ ಫಲವಾದ ನೀತಿಗೆ ಬಾದ್ಯನಾದನು.

ಬೈಬಲ್‌ನ ಮೊದಲ ಐದು ಪುಸ್ತಕದಲ್ಲಿ ಕೇವಲ ಮೂರು ಸಂದರ್ಭಗಳನ್ನು ಮಾತ್ರ ಗಮನಿಸಿದರೆ ಅವರ ಸ್ವಂತ ಅಲೋಚನೆಗಳನ್ನು ಕಲ್ಪಿಸಿಕೊಂಡು ದೇವರ ಆಜ್ಞೆಗಳಿಗೆ ಅವಿಧೇಯರಾದವರನ್ನು ನಾವು ಗಮನಿಸಬಹುದು.

ಮೊದಲನೇಯವರು ತಮಗೆ ತಿಳುವಳಿಕೆಯನ್ನು ಕೊಡುವ ಯಾವುದೊ ಅವಶ್ಯವಾಗಿದೆ ಅದು ಅವರ ಕಣ್ಣಿಗೆ ರಮ್ಯವಾಗಿಯೂ, ಜ್ಞಾನೋದಯಕ್ಕೆ ಅಪೇಕ್ಷಿಸುವಂತದ್ದಾಗಿಯೂ ಎಂದು ಅದನ್ನು ಆಶಿಸಿ ದೇವರಿಗೆ ಅವಿಧೇಯರಾದರು.

ಎರಡನೆಯವರು ದೇವರಗೆ ಸಮರ್ಪಿಸುವುದರಲ್ಲಿ ದೇವರ ಇಷ್ಟವಾದದ್ದನ್ನು ಸಮರ್ಪಿಸದೇ ಅವಿಧೇಯರಾದರು.

ಮೂರನೇಯವರು, ಅವರ ಹೃದಯದ ಆಲೋಚನೆಗಳನ್ನು ಕೆಟ್ಟದ್ದಾಗಿಮಾಡಿಕೊಂಡು ದೇವರಿಗೆ ಅವಿಧೇಯರಾದರು.

ಪ್ರತೀ ಸಂದರ್ಭದಲ್ಲಿಯೂ ದೇವರು ಅವರ ಕೆಟ್ಟ ಕ್ರಿಯೆಗಳನ್ನು ಇಷ್ಟಪಡದೆ ತನ್ನ ಸರಿಯಾದ ಮಾತಿನಿಂದ ಅವರ ಕ್ರಿಯೆಗಳಿಗೆ ತಕ್ಕಂತೆ ತೀರ್ಪುಮಾಡುತ್ತಾ ಬಂದನು. ಸೃಷ್ಠಿಕರ್ತನು ಯಥಾರ್ಥವಂತನಾದ ದೇವರು.ಅವರ ಕ್ರಿಯೆಗಳಿಗೆ ಸರಿಯಾಗಿ ತೀರ್ಪುಮಾಡುತ್ತಾನೆ.

ಪ್ರಶ್ನೆಗಳು:

1.ಕಾಯಿನನ ಕಾಣಿಕೆಯನ್ನು ದೇವರು ಅಂಗೀಕರಿಸಲಿಲ್ಲ ಯಾಕೆಂದರೆ.

A.ಪ್ರಾಣಿ ಬಲಿಗಳಿಗಿಂತಲೂ ಹೊಲದ ಬೆಳೆಯಲ್ಲಿ ಪ್ರಥಮ ಫಲವನ್ನು ಅರ್ಪಿಸಿದು.

B.ಕಾಯಿನನು ಒಳಪಡಲಿಲ್ಲ ಮತ್ತು ಅರ್ಪಿಸುವುದರಲ್ಲಿ ಪಾಪಮಾಡಿದ.

C.ಉತ್ತಮವಾದವುಗಳನ್ನು ತನಗೋಸ್ಕರ ಇಟ್ಟುಕೊಂಡ.

D.ಈ ರೀತಿ ಹೇಳಲಿಲ್ಲ.

2.ನೋಹಾನನು ದೇವರ ಪ್ರಣಾಳಿಕೆಗೆ ತನ್ನ ಸ್ವಂತ ಆಲೋಚನೆ ಮಾಡದೇ ಅನುಸರಿಸಿದನು.

A.ಸರಿ B.ತಪ್ಪು

3.ನೋಹಾನನ ವಿಶ್ವಾಸವು ಯಾವುದರ ಮೇಲೆ ಆಧಾರವಾಗಿದೆ.

A.ದೇವರು ಏನು ಬಯಸುತ್ತಿದ್ದಾನೆ ಅದಕ್ಕೋಸ್ಕರ ತನ್ನ ಆಲೋಚನೆಯಾಗಿತ್ತು

B.ದೇವರು ಏನನ್ನು ಕೋರಿಕೊಳ್ಳುತ್ತಿದ್ದಾನೊ ಇತರರಿಂದ ಅಭಿಪ್ರಾಯ ಕಂಡುಕೊಳ್ಳುವುದು

C.ದೇವರು ಏನು ಬೇಕೆಂದು ಕೇಳಿದನೂ ಆ ದೇವರ ಜ್ಞಾನದ ಮೇಲೆ

4.ತನ ಸ್ವರೊಪದಲ್ಲಿ ಸೃಷ್ಟಿಲ್ಪಟ್ಟ ಮನುಷ್ಯರು ಪಾಪ ಮಾಡಿದಾಗ ದೇವರು ತನ್ನ ಹೃದಯದಲ್ಲಿ ದುಃಖ ಪಟ್ಟನು.

A.ಸರಿ B.ತಪ್ಪು

5.ದೇವರಿಗೆ ಅವಿಧೇಯತೆಯಿಂದ ವಿರೋಧವಾದವರಿಗೆ ಶಿಕ್ಷೆ ಇದೆ.

A.ಸರಿ B.ತಪ್ಪು

***

## ಅವರ ಆಯ್ಕೆ

## (ಆದಿಕಾಂಡ7–10)

### ಪಾಠ–3

ನೋಹಾನನು ದೇವರಿಗೆ ಒಳಗಾದ ಒಬ್ಬ ನೀತಿವಂತನು.ಜಲಪ್ರಳಯದಿಂದ ಮಾನವಜನಾಂಗವನ್ನು ರಕ್ಷಿಸುವ ವಿಶ್ವಾಸದೊಂದಿಗೆ ನಾವೆಯನ್ನು ನಿರ್ಮಿಸಿದ ನಂತರ ನೋಹಾನನು ತನ್ನ ಕುಟುಂಬದವರು ನಾವೆಯೊಳಗೆ ಪ್ರವೇಶಿಸಿದರು. ಮತ್ತು ಜೀವಿಗಳ ಪ್ರತೀ ಜಾತಿಯಲ್ಲಿಯೂ ಒಂದು ಗಂಡು ಒಂದು ಹೆಣ್ಣು ಹೀಗೆ ಎರಡೆರಡನ್ನೂ ನಾವೆಯಲ್ಲಿ ಸೇರಿಸಲು ದೇವರು ಹೇಳಿದನು.ನಂತರ ಆಕಾಶದ ತೂಬುಗಳು ತೆರದವು ಭೂಮಿಯ ಮೇಲೆ ದೊಡ್ಡ ಮಳೆ ಸುರಿಸಿದನು. ಮಹಾ ಜಲಪ್ರಳಯ ಬಂತು ದೇವರು ನಾವೆಯ ಬಾಗಿಲು ಮುಚ್ಚಿ ನಾವೆಯಲ್ಲಿರುವ ನೋಹಾನನ ಕುಟುಂಬ ಹೊರತು, ಭೂಮಿಯ ಮೇಲಿದ್ದದ್ದೆಲ್ಲಾ ಜಲಪ್ರಳಯದಲ್ಲಿ ದೇವರು ನಾಶ ಮಾಡಿದನು. ಕೆಲವು ದಿನಗಳು, ತಿಂಗಳು ಕಳೆದ ನಂತರ ಮಳೆ ತಗ್ಗಿತು. ಆಗ ನೋಹಾನನು ಆತನ ಕುಟುಂಬ ಮತ್ತು ಪ್ರಾಣಿಗಳು ನಾವೆಯಿಂದ ಹೊರಗೆ ಬಂದರು.

ಆಗ ನೋಹಾನನು ಯೆಹೋವನಿಗೋಸ್ಕರ ಯಜ್ಞ ವೇದಿಯನ್ನು ಕಟ್ಟಿ ಅದರ ಮೇಲೆ ಸರ್ವಾಂಗ ಹೋಮ ಸರ್ಮಪಿಸಿ ದೇವರನ್ನು ಆರಾಧಿಸಿದನು. ಈ ಅರ್ಪಣೆಯಲ್ಲಿ ದೇವರು ಸಂತೋಷಪಟ್ಟು ಆಗ ದೇವರು “ಮನುಷ್ಯರ ಸಂಕಲ್ಪವು ಚಿಕ್ಕಂದಿನಿಂದಲೇ ಕೆಟ್ಟದ್ದು ಆದರೂ ನಾನು ಇನ್ನು ಮೇಲೆ ಅವರ ನಿಮಿತ್ತವಾಗಿ ಭೂಮಿಯನ್ನು ಶಪಿಸುವುದಿಲ್ಲ. ಭೂಮಿಯು ಇರುವ ತನಕ ಬಿತ್ತನೆಯೂ,ಚಳಿಯೂ,ಸೆಕೆಯೂ,ಬೇಸಿಗೆಯೂ,ಹಗಲೂ,ಇರುಳೂ,ಹಿಮ ಕಾಲವು ಕ್ರಮ ತಪ್ಪುವುದೇ ಇಲ್ಲ ಎಂದು ಅಂದುಕೊಂಡನು.(ಆದಿ8:21–22).

ದೇವರು ನೋಹಾನನಿಗೆ ಕೆಲವು ಸೂಚನೆಗಳು ಮತ್ತು ಆಜ್ಞೆಗಳನ್ನು ಕೊಟ್ಟನು.

1.ಭೂಮಿಯ ಮೇಲೆ ತಿರುಗುವ ಎಲ್ಲಾ ಜೀವಿಗಳನ್ನು ನಿಮಗೆ ಆಹಾರಕ್ಕಾಗಿ ಪೈರುಗಳನ್ನುಕೊಟ್ಟಂತೆ ಇವುಗಳನ್ನು ಕೊಟ್ಟಿದ್ದೇನೆ.

2. ರಕ್ತದಿಂದ ಕೂಡಿರುವ ಮಾಂಸವನ್ನು ನೀವು ತಿನ್ನಬಾರದು ರಕ್ತವು ಜೀವವಷ್ಟೆ.

3.ರಕ್ತವನ್ನುಸುರಿಸಿ ಪ್ರಾಣವನ್ನು ತೆಗೆಯುವವರಿಗೆ ಮಯ್ಯಿ ತೀರಿಸುವೆನು.

4. ನರಹತ್ಯ ಮಾಡುವುದು ಸಹೋದರ ಹತ್ಯವಲ್ಲವೋ ದೇವರು ಮನುಷ್ಯರನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದ್ದರಿಂದ ಯಾರು ಮನುಷ್ಯರ ರಕ್ತವನ್ನು ಸುರಿಸುತ್ತಾರೂ ಅವರ ರಕ್ತವನ್ನು ಮನುಷ್ಯರೇ ಸುರಿಸುವರು.

5. ನೀವು ಅಭಿವೃದ್ಧಿಯಾಗಿ ಹೆಚ್ಚಿರಿ ಭೂಮಿಯ ಮೇಲೆ ನಿಮಗೆ ಬಹು ಸಂತಾನವಾಗಲಿ ಎಂದು ಹೇಳಿದನು.

ಆಗ ದೇವರು ನೋಹಾನನೊಂದಿಗೆ ಮತ್ತು ಸಮಸತ್ತ ಭೂ ಜಂತುಗಳೊಂದಿಗೆ ಒಂದು ನಿಭಂದನೆಯನ್ನು ಮಾಡಿಕೊಂಡನು. ನೋಹಾನನ ನಂತರ ತನ್ನ ಸಂತಾನದಲ್ಲಿ ಹಾಮನು ತನ್ನ ಸಹೋದರರಿಗೆ ದಾಸ ನಾಗುವಂತೆ, ತಂದೆಯೊಂದಿಗೆ ಅಮರ್ಯ್ಯಾದೆಯಿಂದ ನಡೆದು ಕೊಂಡದ್ದರಿಂದ ಅವನನ್ನು ಶಪಿಸಿದನು. ಹೀಗೆ ಪಾಪವು ಮತ್ತೇ ಬಾಗಿಲು ತಟ್ಟಿತು.

ಇದಲ್ಲದೆ ದೇವರ ಜ್ಞಾನವು ಅವರಿಗೆ ಇಷ್ಟವಿಲ್ಲದ್ದರಿಂದ ಅಲ್ಲದ ಕೃತ್ಯಗಳನ್ನು ನಡೆಸುವವರಾಗುವಂತೆ ದೇವರು ಅವರನ್ನು ಅನಿಷ್ಟಭಾವಕ್ಕೆ ಒಪ್ಪಿಸಿದನು.ಹೇಗೆಂದರೆ "ಅವರು ಸಕಲವಿಧವಾದ ಅನ್ಯಾಯ, ದುರ್ಮಾಗತನ ಲೋಲುಪ್ತಿ ದುಷ್ಟತ್ವಗಳಿಂದಲೂ ಹೊಟ್ಟೆಕಿಚ್ಚು ಕೊಲೆ ಜಗಳ ಮೋಸ ಹಗೆತನಗಳಿಂದ ತುಂಬಿದವರಾದರು. ಅವರು ಕಿವಿ ಊದುವವರೂ ಸೊಕ್ಕಿನವರೂ ವಿವೇಕವಿಲ್ಲದವರು ಮಮತೆ ಇಲ್ಲದವರೂ ಕರುಣೆ ಇಲ್ಲದವರೂ ಮಾತಿಗೆ ತಪ್ಪುವವರೂ ಆದರು. ಇಂಥವುಗಳನ್ನು ನದೆಸುವವರು ಮರಣಕ್ಕೆ ಪಾತ್ರವಾಗಿದ್ದಾರೆಂಬ ದೇವ ವಿಧಿಯು ಅವರಿಗೆ ತಿಳಿದಿದ್ದರೂ ಅವರು ತಾವೇ ಅವುಗಳನ್ನು ಮಾಡುವುದಲ್ಲದೆ ಮಾಡುವವರನ್ನು ಅನುಮೋದಿಸುತ್ತಾರೆ.(ರೋಮಾ1:28–32).

ನೋಹಾನನ ಕಾಲಕ್ಕೂ ಮತ್ತು ಹೀಗಿನ ನಮ್ಮ ಪರಿಸ್ಥಿತಿಗಳಿಗೆ ಹೋಲಿಕೆಗಳಗನ್ನು ಈ ಕೆಳಗೆ ಗಮನಿಸಬಹುದು.

1. ಆ ಜನರು ಪಾಪದಲ್ಲಿದ್ದಾರೆ ಮತ್ತು ನಾವು ಸಹ ಪಾಪಿಗಳು.

" ಎಲ್ಲಾರು ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ"(ರೋಮಾ3:23).

2. ಅವರು ಪಾಪದಿಂದ ಮರಣ ಹೊಂದುತಿದ್ದಾರೆ ಮತ್ತು ನಾವು ಸಹ ಸಾಯಿತ್ತಿದ್ದೇವೆ.

"ಆದ್ದರಿಂದ ನೀವು ನಿಮ್ಮ ಪಾಪಗಳಲ್ಲಿಯೇ ಸಾಯುವಿರೆಂದು ನಿಮಗೆ ಹೇಳಿದನು"(ಯೋಹಾನ8:24).

3. ನೀತಿವಂತರನ್ನು ಕಾಪಾಡುವುದಕ್ಕೆ ಏನು ಮಾಡಬೇಕು ಎಂದು ದೇವರು ನೋಹಾನನಿಗೆ ಹೇಳಿದ್ದಾನೆ ಮತ್ತು ನಮಗು ಸಹ ಹೇಳಲ್ಪಟ್ಟಿದೆ.

"ನನ್ನನು ಆತನೆಂದು ನಂಬದೆ ಹೋದರೆ ನಿಮ್ಮ ಪಾಪಗಳಲ್ಲಿಯೇ ಸಾಯುವಿರೆಂದು ಹೇಳಿದನು"(ಯೋಹಾನ 8:24(A).

4. ನೋಹಾನನ ಕಾಲದಲ್ಲಿರುವವರೆಲ್ಲರೂ ಜಲಪ್ರಳಯದಿಂದ ರಕ್ಷಿಸಲ್ಪಡುವುದಕ್ಕೆ ಒಂದು ಅವಕಾಶವಿತ್ತು ನಮಗೂ ಸಹ ಆಯ್ಕೆ ಮಾಡಿಕೊಳ್ಳಲು ಒಂದು ಅವಕಾಶವಿದೆ.

" ಈಗಲೇ ಆಪ್ರಸನ್ನತೆಯ ಕಾಲ ಅದೇ ಆ ರಕ್ಷಣೆಯ ದಿನ"(1ಕೊರಿಂಥ6:2(B)).

ಪ್ರಶ್ನೆಗಳು:

1. ದೇವರ ಮಾತುಗಳನ್ನು ಕೇಳಿ, ಅನುಸರಿ ನಾವೆಯನ್ನು ಕಟ್ಟುವುದು ಮತ್ತು ಮಾನವ ಜನಾಂಗವನ್ನು ಕಾಪಾಡಿದ್ದಕ್ಕೆ ನೋಹಾನನು ನೀತಿವಂತನಾದನು.

**A.**ಸರಿ **B.**ತಪ್ಪು

2. ಒಬ್ಬ ವ್ಯಕ್ತಿ ಶಿಕ್ಷಿಸಲ್ಪಡುವುದಕ್ಕೆ ಅನುಕೂಲವಾದ ಸಮಯ

**A.**ಒಬ್ಬ ವ್ಯಕ್ತಿ ಕೂಪವನ್ನು ಅಡಗಿಸಿದ ನಂತರ

**B.** ಕುಟುಂಬದ ಕೆಲಸಕ್ಕಿಂತಲೂ ಈ ಸಮಯ ಅಷ್ಟು ಮಹತ್ವದ್ದಲ್ಲ

**C.** ಈಗಲೇ ಸುಪ್ರಸನ್ನತೆಯ ಕಾಲ ಇದೇ ಆ ರಕ್ಷಣೆಯ ದಿನ

3.ನೋಹಾನನು ದೇವರನ್ನು ಆರಾಧಿಸಿದ ನಂತರ ಇನ್ನೂ ಮುಂದೆ ಯಾವತ್ತು ಜೀವ ಜಂತುಗಳೇಲ್ಲವುಗಳನ್ನೂ ಮತೇ ನೀರಿನಿಂದ ನಾಶ ಮಾಡುವುದಿಲ್ಲ ಎಂದು ದೇವರು ವಾಗ್ದಾನ ಮಾಡಿದನು.

**A.**ಸರಿ **B.**ತಪ್ಪು

4.ನಾವೆಯನ್ನು ಕಟ್ಟುವುದಕ್ಕೆ ದೇವರು ತೋರಿಸಿದ ನಿಯಮ,ವಿಧಾನಗಳನ್ನು ಮಾತ್ರ ಅನುಸರಿಸಿದನು.

**A.**ಸರಿ **B.**ತಪ್ಪು

5.ಯೇಸು ಕ್ರಿಸ್ತನಲ್ಲಿ ನಂಬಿಕೆ ಇಟ್ಟವರು ಪಾಪದಲ್ಲಿಯೇ ಇದ್ದು ನಶಿಸಿಹೋಗುವರು.

**A.**ಸರಿ **B.**ತಪ್ಪು

***

ಒಡಂಬಡಿಕೆ

(ಆದಿಕಾಂಡ 4)

ಪಾಠ–4

ದೇವರಿಗೆ ಒಳಗಾಗುವುದಕ್ಕಿಂತಲೂ ಅವರ ಸ್ವಂತ ಪ್ರೇರೇಪಣೆ ಯಿಂದ ಆದಾಮನು ಮತ್ತು ಅವ್ವಳುಗೆ ಶೋಧನೆ ಎದುರಾದ ನಂತರ ಜಳಪ್ರಳಯಕಿಂತ 290 ವರ್ಷಗಳ ಮುಂಚೆ ಅಂದರೆ ಕಲ್ಲಿನ ಹಲಗೆಯ ಮೇಲೆ ಆಜ್ಞೆಗಳನ್ನು ದೇವರು ಮೋಶೆಗೆ ಕೊಟ್ಟ ಕೆಲವು ವರ್ಷಗಳಿಗಿಂತ ಮುಂಚೆ ತೆರಹನು ಅಬ್ರಹಾಮನ್ನು ಹೆತ್ತನು. ಅಬ್ರಹಾಮನು ದೊಡ್ಡವನಾದ ನಂತರ ದೇವರು ಅಬ್ರಹಾಮನೊಂದಿಗೆ ವಾಗ್ದಾನವನ್ನು ಹೀಗೆ ಮಾಡಿದನು.

"ಯೆಹೋವನು ಅಬ್ರಹಾಮನಿಗೆ ನೀನು ಸ್ವದೇಶವನ್ನೂ, ಬಂಧು ಬಳಗವನ್ನೂ,ತಂದೆ ಮನೆಯನ್ನೂ ಬಿಟ್ಟು ನಾನು ತೋರಿಸುವ ದೇಶಕ್ಕೆ ಹೂರಟು ಹೋಗು. ನಾನು ನಿನ್ನನ್ನು ದೂಡ್ಡ ಜನಾಂವಾಗುವಂತೆ ಮಾಡಿ ಆಶೀರ್ವದಿಸಿ ನಿನ್ನ ಹೆಸರನ್ನು ಪ್ರಖ್ಯಾತಿಗೆ ತರುವೆನು. ನೀನು ಆಶೀರ್ವವಾದ ನಿಧಿ ಯಾಗುವಿ ನಿನ್ನನ್ನು ಹರಸುವವರನ್ನು ಹರಸುವೆನು, ನಿನ್ನನ್ನು ಶಪಿಸುವವರನ್ನು ಶಪಿಸುವೆನು ನಿನ್ನ ಮೊಲಕ ಭೋಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದ ಉಂಟಾಗುವುದು ಎಂದು ಹೇಳಿದನು" (ಆದಿ12:1–3).

ದೇವರು ಅಬ್ರಮನನ್ನು ಅಬ್ರಹಾಮ ಎಂದು ಹೆಸರಿಟ್ಟು ತನ್ನ ಒಡಂಬಡಿಕೆಯನ್ನು ಸ್ಥಿರಪಡಿಸಿದನು."ನಂಬಿಕೆಯಿಂದಲೇ ಅಬ್ರಹಾಮನು ಕರೆಯಲ್ಪಟ್ಟ ಕೂಡಲೇ ಕರೆದಾತನ ಮಾತನ್ನು ಕೇಳಿ ಹೂರಟು ಹೋದನು; ತಾನು ಹೋಗ ಬೇಕಾದ ಸ್ಥಳವೂ ಯಾವದೆಂದು ತಿಳಿಯದೆ ಹೊರಟನು. ನಂಬಿಕೆಯಿಂದಲೇ ಅವನು ವಾಗ್ದಾನ ದೇಶಕ್ಕೆ ಬಂದಾಗ ಅಲ್ಲಿ ಅನ್ಯ ದೇಶದಲ್ಲಿ ಇದ್ದವನಂತೆ ಡೇರೆಗಳಲ್ಲಿ ಇದ್ದುಕೂಂಡು ಪ್ರವಾಸಿಯಾಗಿ ಬದುಕಿದನು.ಅದೇ ವಾಗ್ದಾನಕ್ಕೆ ಸಹ ಬಾದ್ಯರಾಗಿದ್ದ ಇಸಾಕನೂ,ಯಾಕೋಬನು ಅವನಂತೆಯೇ ಡೇರೆಗಳಲ್ಲಿ ವಾಸಿಸಿದರು. ಯಾಕೆಂದರೆ ಅವನು ಶಾಶ್ವತವಾದ ಅಸ್ತಿವಾರಗಳುಳ್ಳ ಪಟ್ಟಣವನ್ನು ಅಂದರೆ ದೇವರು ಸಂಕಲ್ಪಿಸಿದ ಪಟ್ಟಣವನ್ನು ಎದುರು ನೋಡುತ್ತಿದ್ದನು"(ಇಬ್ರಿಯ11:8–11).

ಅಬ್ರಹಾಮನಿಗೆ ಮಾಡಿದ ಒಡಂಬಡಿಯು ಒಂದು ಜನಾಂಗಕ್ಕೆ,ಒಂದು ಜಾತಿಯ ಪ್ರಜೆಗಳಿಗೆ ಅಲ್ಲದೆ ಸರ್ವಮಾನವ ಜನಾಂಗಕ್ಕೆ ಮಾಡಿದನೆಂದು ನೆನಪಿನಲ್ಲಿಟ್ಟುಕೂಳ್ಳಬೇಕು.ದೇವರು ಅಬ್ರಹಾಮನೂಂದಿಗೆ ಮತ್ತು ಆತನ ಹೆಂಡತಿ ಸಾರಳೂಂದಿಗೆ ಅನೇಕ ಮಂದಿ ಸಂತಾನವನ್ನು ಕೊಡುತ್ತೇನೆಂದು ವಾಗ್ದಾನ ಮಾಡಿದಾಗ ಅವರಿಗೆ ಮಕ್ಕಳಿರಲಿಲ್ಲ. ಒಬ್ಬ ಮಗನಿಗೋಸ್ಕರ ದೇವರ ವಾಗ್ದಾನ ನೆರೆವೇರಿಸುವುದರಲ್ಲಿ ಅವರು ಸಹನೆಯನ್ನು ಕಳೆದುಕೂಂಡಿದ್ದರು. ಅಂದರೆ ಮನುಷ್ಯರೀತಿಯಾಗಿ ಅಲೋಚನೆ ಮಾಡಿದರು ಅವರು ವಾಗ್ದಾನವನ್ನು ಕೈಗೆತ್ತಿಕೂಂಡು ಪರೀಕ್ಷೆ

ಮಾದರಬೇಕೆಂದು ಅಂದು ಕೂಂಡರು ಅವರ ಈ ಅವಿಧೇಯತೆಯಿಂದ ಮಾಡಿದ ಕಾರ್ಯದಿಂದಲೇ ಆ ನಂತರದ ಕಾಲದಲ್ಲಿ ಇಸ್ಮಾಯೇಲ ಎನ್ನುವ ತನ್ನ ದಾಸಿಗೆ ಜನಿಸಿದ ಸಂತಾನಕ್ಕೂ ಮತ್ತು ವಾಗ್ದಾನದ ಮಗನಾದ ಇಸ್ಸಾಕನ ಸಂತಾನಕ್ಕೂ ಕಲಹಗಳು ನಡೆದವು.ಇವತ್ತಿಗೂ ಆ ಕಲಹಗಳು ಮುಂದುವರಿಯುತ್ತಿವೆ.ಮಕ್ಕಳನ್ನು ಹೇರುವುದು ಅಬ್ರಹಾಮ,ಸಾರಳ ದೇಹಕ್ಕೆ ಅಸಾಧ್ಯವಾಗುವವರೆಗೂ ದೇವರು ಕಾದುಕೂಂಡಿದ್ದನು. ಆ ಮೇಲೆ ಅವರಿಗೆ ಒಬ್ಬ ಮಗನು ಜನಿಸಿದನು.ಅಂದರೆ ಅದು ನೇರವಾಗಿ ದೇವರ ವಾಗ್ದಾನ ಮತ್ತು ಅವರ ಫಲಿತಾಂಶ  ಎನ್ನುವುದರಲ್ಲಿ ಸಂದೇಹವಿಲ್ಲ.

"ಇದಲ್ಲದೆ ಸಾರಳು ವಾಗ್ದಾನ ಮಾಡಿದಾತ ನನ್ನು ನಂಬತಕ್ಕವನೆಂದೆಣಿಸಿ ತಾನು ಪ್ರಾಯಮೀರಿದವಳಾಗಿದ್ದರೂ ನಂಬಿಕೆಯಿದಲೇ ಗರ್ಭವತಿಯಾಗುವುದಕ್ಕೆ ಶಕ್ತಿಯನ್ನು ಹೂಂದಿದಳು".(ಇಬ್ರಿಯ11:11–12).

ಅಬ್ರಹಾಮನು ಅನೇಕ ಜನರಿಗೆ ನಂಬಿಕೆಯ ತಂದೆ ಎಂದು ಕರೆಯಲಟ್ಟರೂ ಆತನು ಪಾಪ ಇಲ್ಲದವನಲ್ಲ ಒಂದಕ್ಕಿಂತ ಹೆಚ್ಚುಸಾರಿ ಸುಳ್ಳಾಡಿದನು ಆದರೆ ಆತನು ದೇವರಿಂದ ಕರೆಯಲ್ಪಟ್ಟಾಗ ಬದಲಾವಣೆಗೂಂಡನು.ತನ್ನ ನಂಬಿಕೆಯನ್ನು ವಿಧೇಯತೆಯಿಂದ ದೇವರ ಮೇಲೆ ಇಟ್ಟನು ನಂಬಿಕೆ ಇಡುವವರೆಲ್ಲರನ್ನೂ ಬಿಡುಗಡೆ ಮಾಡುವುದಕ್ಕೆ ಅಬ್ರಹಾಮನ ಸಂತಾನದಿಂದ ಅಂದರೆ ಇಸ್ಸಾಕನೂ,ಯಾಕೋಬನ ವಂಶದಿಂದ ಒಬ್ಬ ರಕ್ಷಕನು ಬರುವುದಕ್ಕೆ ಮಾರ್ಗವಾಯಿತು.

ಎಲ್ಲಾ ಜನಾಂಗಗಳಲ್ಲಿ ಮತ್ತು ಜಾತಿಗಳಲ್ಲಿ ನಡೆದ ಪ್ರಕಾರ ದೇವರ ಮೇಲೆ ನಂಬಿಕೆ ಇಟ್ಟು ಒಳಪಟ್ಟವರಿಗೆ ಆಶೀರ್ವಾವು, ಎದುರಾಳಿಗಳಿಗೆ, ಅವೀದೆಯರಿಗೆ ಶಿಕ್ಷಿಸುಸುವುದರಲ್ಲಿ ಆಶ್ಚರ್ಯವಿಲ್ಲ ದೇವರು ಅಬ್ರಹಾಮನೊಂದಿಗೆ ಮಾಡಿದ ಒಡಂಬಡಿಕೆ ನಮಗೆ ಕ್ರಿಸ್ತನಲ್ಲಿ ನೆರವೇರಲ್ಪಟ್ಟಿದೆ. ನಾವು ಕ್ರಿಸ್ತನಲ್ಲಿ ನಂಬಿಕೆ ಇಟ್ಟು ರಕ್ಷಣೆ ಹೂಂದುವುದರೊಂದಿಗೆ ಅಬ್ರಹಾಮನಿಗೆ ಕೂಟ್ಟವಾಗ್ದಾನ ಹೂಂದುವವರಾಗಿದ್ದೇವೆ. "ಅಬ್ರಹಾಮನು ತೊಂಭತ್ತೊಂಭತ್ತು ವರುಷದವನಾದಾಗ ಯೆಹೋವನು ಅವನಿಗೆ ದರ್ಶನಕೊಟ್ಟು –ನಾನು ಸರ್ವಶಕ್ತನಾದ ದೇವರು;ನನಗೆ ನಡಕೊಂಡು ದೋಷವಿಲ್ಲದವನಾಗಿರು.ನಾನು ನಾನು ನಿನ್ನ ಸಂಗಡ ಒಡಂಬಡಿಕೆ ಮಾಡಿಕೊಳುತ್ತೇನೆ;ಅತ್ಯಧಿಕವಾದ ಸಂತತಿಯನ್ನು ಕೊಡುವೆನು ಅಂದನು."(ಆದಿ17:1–2).

ಗಂಡು ಮಕ್ಕಳೆಲ್ಲರಿಗೂ ಸುನ್ನತಿ ಮಾಡಬೇಕು ಎಂದು ದೇವರು ಹೇಳಿದ ಆಜ್ಞೆಗೆ ಅಬ್ರಹಾಮನು ಒಳಗಾಗುವುದರೊಂದಿಗೆ ಈ ಒಡಂಬಡಿಕೆಯು ಸ್ತಿರವಾಯಿತು.ಮೋಶೆಗೆ ಧರ್ಮಶಾಸ್ತ್ರವನ್ನು ಕೊದುವುದಕ್ಕಿಂತ ಮುಂಚೆ ಅನೇಕ ವರ್ಷಗಳ ಹಿಂದೆ ಸುಮಾರು ನೂರು ವರ್ಷಗಳ ಹಿಂದೆ ಅಂದರೆ ಅಬ್ರಹಾಮ,ಸಾರಳಿಗೆ ಮಕ್ಕಳಾಗದೆ ಇರುವುದಕ್ಕಿಂತ ಮುಂಚೆ ಇದು ನಡೆದಿತ್ತು.  ಆ ಮೇಲೆ ಒಂದು ವರ್ಷಗಳ ನಂತರ ಇಸ್ಸಾಕನು ಹುಟ್ಟಿದಾಗ ಆ ಒಡಂಬಡಿಕೆ ಪ್ರಕಾರವಾಗಿ, 8ನೇ ದಿನದಲ್ಲಿ ಅಬ್ರಹಾಮನು ಆತನಿಗೆ ಸುನ್ನುತಿ ಮಾಡಿಸಿದನು.

ದೇವರಿಗೆ ಅಬ್ರಹಾಮನಿಗೆ ಮದ್ಯ ಇದ್ದ ಸಂಭದವುಯಾವುದನ್ನು ಸೂಚಿಸುತ್ತದೆ? ಮೊದಲನೆಯದಾಗಿ ದೇವರು ವಿಶ್ವಾಸಕ್ಕೆ ವಿಧೇಯತೆಯನ್ನು ಕೋರುತ್ತಾನೆ.ಅಬ್ರಹಾಮನ ವಿಶ್ವಾಸದ ಮೊಲಕ ಮನುಷ್ಯರು ದೇವರೊಂದಿಗೆ ಸಮಧಾನ ಹೊಂದುವ ಮಾರ್ಗವನ್ನು ದೇವರು ಆರಂಭಿಸಿದನು.ಮನುಷ್ಯರ ಪಾಪಗಳಿಗೋಸ್ಕರ ನಜರೇತಿನ ಯೇಸು ಪರಿಪೂರ್ಣ ವಿಶ್ವಾಸ,ವಿಧೇಯತೆಯೊಂದಿಗೆ ತನ್ನನ್ನು ತಾನು ಮಹಿಮೆಯುಳ್ಳ ಯಜ್ಞವಾಗಿ ಸಮರ್ಪಿಸಿಕೊಳ್ಳುವ ಕಾಲದ ವರೆಗೆ ಅದುತಿಳಿಯಪಡಿಸಲಿಲ್ಲ. ದೇವರು ಅಬ್ರಹಾಮನೊಂದಿಗೆ ಮಾಡಿದ ವಾಗ್ದಾನವನ್ನು ಮುಂದುವರೆಸಲು ನಂಬಿಕೆಗೆ ಮೂಲ ತಂದೆ ಯಾಗುವುದಕ್ಕಿಂತ ಮುಂಚೆ ಅನೇಕ ಚರಿತ್ರೆ ನಡೆಯಿತು.

ಅಬ್ರಹಾಮನೊಂದಿಗೆ ದೇವರು ಮಾಡಿದ ವಾಗ್ದಾನಗಳು:

1. ಸಂತಾನವನ್ನು ಕುರಿತಾದ ವಾಗ್ದಾನ ಅದು ಇಸ್ಸಾಕನ ಮೂಲಕ ಅಂದರೆ ಅಬ್ರಹಾಮನ ಮೂಲಕ ಒಡಂಬಡಿಕೆ ಮುಂದುವರೆಯುತ್ತದೆ ಹೊರತು ಇಸ್ಮಾಯೀಲನ ಮೂಲಕ ಅಲ್ಲ.

2. ಕಾನಾನ್ ದೇಶ ಕುರಿತಾದ ವಾಗ್ದಾನ 'ಯೆಹೋವನು ಅಬ್ರಹಾಮನಿಗೆ ನೀನು ಸ್ವದೇಶವನ್ನು ಬಿಟ್ಟು ನಾನು ತೋರಿಸುವ ದೇಶಕ್ಕೆ ಹೂರಟು ಹೋಗು' ಎಂದಾಗ ಅಬ್ರಹಾಮನು ಕಾನಾನ್ ದೇಶಕ್ಕೆ ಬಂದನು. ಆಗ ದೇವರು ಅಬ್ರಹಾಮನಿಗೆ "ನಿನ್ನ ಸಂತಾನಕ್ಕೆ ಈ ದೇಶವನ್ನು ಕೊಡುವೆನು" ಎಂದು ವಾಗ್ದಾನ ಮಾಡಿದನು. ಅಬ್ರಹಾಮನ ಸಂತಾನವು ಈ ದೇಶವನ್ನು ಹೊಂದುವುದಕ್ಕೆ ಐಗುಪ್ತದ 400 ವರ್ಷಗಳ ಕಾಲ ದಾಸತ್ವದಿಂದ ಬಿಡುಗಡೆ ಹೊಂದಿ 40 ವರ್ಷಗಳು ಅರಣ್ಯದಲ್ಲಿ ಸಂಚರಿಸಿ ನಂತರ ಉಳಿದ ಇಸ್ರೇಯೇಲರ ಸಂತಾನಕ್ಕೆ ಕಾನಾನ್ ಅಂದರೆ ವಾಗ್ದಾನ ದೇಶವನ್ನು ಒಪ್ಪಿಸಲಾಯಿತು.ಅದೇ ವಿಧವಾಗಿ ದೇವರೊಂದಿಗೆ ನಾವು ಸಹಾ ತಿರಿಗಿ ಸೇರಲು ಈ ರೀತಿಯಾದ ಪ್ರಯತ್ನನವು ನಡೆಯಿತು.ದೇವರು ನಮ್ಮ ಮೇಲೆ ಕನಿಕರ ತೋರಿಸಿ, ತನ್ನ ಮಗನನ್ನು ಕಳುಹಿಸಿ,ಆತನನ್ನು ಶಿಲುಬೆಯ ಮೇಲೆ ಸಮರ್ಪಿಸಿದನು.ಮನುಷ್ಯರು ದೇವರೋಂದಿಗೆ ಸಮಧಾನ ಪಡುವುದಕ್ಕೆ ಬೇರೆ ಮಾರ್ಗವಿಲ್ಲ,ಅವಕಾಶಗಳು ಸಹಾ ಇಲ್ಲ. ದೇವರ ವಾಕ್ಯದಲ್ಲಿ ನಂಬಿಕೆಯನ್ನಿಟ್ಟು ಅಂದರೆ 'ಸಮಧಾನ ಸಂದೇಶ'ದಲ್ಲಿ ವಿಶ್ವಾಸವನ್ನಿರಿಸಿ ವಿಧೇಯರಾಗುವುದರೊಂದಿಗೆ ನಮಗೂ ಸಹಾ ದೇವರೊಂದಿಗೆ ಸಮಧಾನ ಏರ್ಪಡುತ್ತದೆ.

ಪ್ರಶ್ನೆಗಳು:

1.ಆತನ ಸಂತಾನವು ಮಾನವರೇಲ್ಲರನ್ನೂ ಆಶೀರ್ವದಿಸುವುದು ಎಂದು ಅಬ್ರಹಾಮನಿಗೆ ದೇವರು ಮಾಡಿದ ವಾಗ್ದಾನವನ್ನು  ಯಾವಾಗ ಕೊಟ್ಟಿದ್ದಾನೆ.

A.ಹತ್ತು ಆಜ್ಞೆಗಳು ಕೊಟ್ಟ ಮೇಲೆ.

B.ಇಸ್ಸಾಕನನ್ನು ಅಬ್ರಹಾಮನು ಬಲಿ ಕೊಟ್ಟ ನೊತರ.

C.ಸುನ್ನತಿಗಿಂತ ಮುಂಚೆ ಮತ್ತು ಕಾನಾನ್ ಸೇರುವುದಕ್ಕಿಂತ ಮುಂಚೆ.

2.ಇಸ್ರಾಯೇಲರಲ್ಲಿ ವಾಗ್ದಾನ ಮಾಡಿದ ಅನೇಕ ವರ್ಷಗಳಿಗಂತ ಮುಂಚೆ ಅಂದೆ ಅಬ್ರಹಾಮನೊಂದಿಗೆ ದೇವರು ವಾಗ್ದಾನ ಮಾಡಿದಾಗ ಅದು ದೇವರ ಮೇಲೆ ಅಬ್ರಹಾಮನು ನಂಬಿಕೆ ಇಡುದಕ್ಕೆ ತೋರಿಸಿದ ಇಚ್ಚೆಯ ಮೇಲೆ ಆಧಾರವಾಗಿದೆ.

A.ಸರಿ B.ತಪ್ಪು

3.ಅಬ್ರಹಾಮ ಮತ್ತು ಇಸ್ಸಾಕರಿಗೆ ದೇವರ ಮೇಲೆ ನಂಬಿಕೆ ಮತ್ತು ವಿಧೇಯತೆಯ ನಿಮಿತ್ತ ಇಸ್ಸಾಕನ ಭೌತಿಕ ಜೀವನ ಕಷ್ಟವಾಗಿತ್ತು.

A.ಸರಿ B.ತಪ್ಪು

4.ದೇವರು ಅಬ್ರಹಾಮನಿಗೆ ಮಾಡಿದ 2 ವಾಗ್ದಾನಗಳು.

A.ಸಂತಾನ ಮತ್ತು ಸಂಪಾದನೆ

B.ಸಂತಾನ ಮತ್ತು ವಾಗ್ದಾನ ದೇಶ

C.ಐಶ್ವರ್ಯ ಮತ್ತು ಜ್ಞಾನ

5. ದೇವರು ತನ್ನ ವಾಗ್ದಾನವನ್ನು ನೆರವೇರಿಸುವನು.

A.ಸರಿ B.ತಪ್ಪು

***

## ಘೋರವಾದ ಪಾಪ

## (ಆದಿಕಾಂಡ18–19)

### ಪಾಠ–5

ಲೋಟನಿಗೆ ಮತ್ತು ಅಬ್ರಹಾಮನಿಗೆ ವ್ಯಾಜ್ಯ ಉಂಟಾದ ಕಾರಣ ತನಗೆ ಇಷ್ಟವಾದ ಭೂಮಿಯನ್ನು ಆಯ್ದುಕೊ ಎಂದು ಅಬ್ರಹಾಮನು ಲೋಟನಿಗೆ ಹೇಳಲು ಲೋಟನು ಸೊದೋಮ್ ಪಟ್ಟಣದ ಸುತ್ತಲಿನ ಪ್ರಾಂತ್ಯಗಳನ್ನು ಆಯ್ಕೆ ಮಾಡಿಕೊಂಡನು ಉಳಿದ ಪ್ರಾಂತ್ಯಗಳು ಅಬ್ರಹಾಮನು ತೆಗೆದುಕೊಂಡನು.ಸೊದೋಮ್ ಪಟ್ಟಣದಲ್ಲಿನ ಜನರನ್ನು ಕುರಿತು ದೇವರು ಈ ರೀತಿ ಹೇಳಿದ್ದನು. “ಇದಲ್ಲದೆ ಯೆಹೋವನು–ಸೊದೋಮ್ ಗೊಮೋರಗಳ ವಿಷಯವಾಗಿ ಎಷ್ಟೋ ದೊಡ್ಡ ಮೊರೆ ನನಗೆ ಮುಟ್ಟಿತು; ಆ ಊರಿನವರ ಮೇಲೆ ಹೊರಿಸಿರುವ ಪಾಪವು ಎಷ್ಟೋ ಘೋರವಾದದ್ದು; ನಾನು ಇಳಿದು ಹೋಗಿ ನನಗೆ ಮುಟ್ಟಿದ ಮೊರೆಯಂತೆಯೇ ಅವರು ಮಾಡಿದರೋ ಇಲ್ಲವೋ ಎಂದು ತಿಳುಕೊಳ್ಳುತ್ತೇನೆ ಅಂದನು”(ಆದಿ18:20–21).

ಆ ಪಟ್ಟಣವೆಲ್ಲಾ ಕೆಟ್ಟು ಹೋಗಿತ್ತು. ಆದ್ದರಿಂದ ದೇವರು ಸೊದೋಮ್ ಪಟ್ಟಣವನ್ನು ನಾಶ ಮಾಡಬೇಕೆಂದು ದೇವರು ದೂತರನ್ನು ಕಳುಹಿಸುವುದಕ್ಕಿಂತ ಮುಂಚೆ ಯಾರಾದರು ನೀತಿವಂತರಿದ್ದಾರ? ಒಂದುವೇಳೆ ಇದ್ದರೆ ಸೊದೋಮ್ ಪಟ್ಟಣನಾಶ ಮಾಡಂತೆ ಕಾಪಾಡಲು ಅಬ್ರಹಾಮನು ದೇವರನ್ನು ಬೇಡಿಕೊಂಡಾಗ ಅಬ್ರಹಾಮನೊಂದಿಗೆ ದೇವರು ತನ್ನ ಪ್ರಣಾಳಿಕೆಯನ್ನು ಮೊದಲೇ ತಿಳಿಸಿದ್ದನು ಆದರೂ ಅಲ್ಲಿ ಬಹಳ ಕಡಿಮೆ ಜನರು ಮಾತ್ರ ನೀತಿವಂತರಿದ್ದರು.ಆದ್ದರಿಂದ ಆ ದೇವ ದೂತರು ಮನುಷ್ಯರೂಪದಲ್ಲಿ ಸಾಯಂಕಾಲದ ಸಮಯದಲ್ಲಿ ಪಟ್ಟಣದ ಊರು ಬಾಗಿಲ ಮೊಲಕ ಪಟ್ಟಣ ಪ್ರವೇಶಿಸಿದರು.ಲೋಟನು ಅವರನ್ನು ಎದುರುಗೊಂಡು ನಮಸ್ಕರಿಸಿ ಮನೆಗೆ ಕರೆದುಕೊಂಡು ಹೋದನು.ಲೋಟನು ಆ ದೇವ ದೂತರಿಗೆ ತನ್ನದಲ್ಲದ ದೇಶದಲ್ಲಿ ಔತಣವನ್ನು ಮಾಡಿಸಿದನು ಮತ್ತು ಸೇವೆ ಮಾಡಿದನು. ಆ ಪಟ್ಟಣದ ದುಷ್ಟತ್ವದ ಜನರಲ್ಲಿ ಸೇರಲಿಲ್ಲ. ಆದ್ದರಿಂದ ಆ ದೂತರು ಆತನನ್ನು ಆತನ ಕುಟುಂಬವನ್ನು ಆ ಶಿಕ್ಷೆಯಿಂದ ಕಾಪಾದಿದರು.ಸೊದೋಮ್ ಪಟ್ಟಣದ ದುಷ್ಟತ್ವವನ್ನು ಈ ಕೆಳಗಿನ ವಚನಗಳಲ್ಲಿ ನೋಡಬಹುದು.

“ಅವರು ಮಲಗುವುದಕ್ಕಿಂತ ಮುಂಚೆ ಹುಡುಗರು ಮುದುಕರು ಸಹಿತವಾಗಿ ಸೊದೋಮಿನ ಪಟ್ಟಣ ದವರೆಲ್ಲರೂ ಒಗ್ಗಟ್ಟಾಗಿ ಮನೆಯನ್ನು ಸುತ್ತಿಕೊಂಡು ಲೋಟನಿಗೆ–ಈರಾತ್ರಿ ನಿನ್ನ ಬಳಿಗೆ ಬಂದ ಮನುಷ್ಯರು ಎಲ್ಲಿ? ಅವರನ್ನುಹೊರಕ್ಕೆ ತೆಗೆದುಕೊಂಡು ಬಾ; ಅವರೊಡನೆ ಅಮಗೆ ಸಂಗಮವಾಗಬೇಕೆಂದು ಕೊಗಿ ಹೇಳಿದರು. ಲೋಟನು ಅವರ ಬಳಿಗೆ ಹೊರಕ್ಕೆ ಬಂದು ತನ್ನ ಹಿಂದೆ ಕದಹಾಕಿ–ಅಣ್ಣಂದಿರೇ, ಈ ಪಾತಕವನ್ನು ಮಾಡಬೇಡಿರಿ.ಕೇಳಿರಿ,ನನಗೆ ಪುರುಷರನ್ನು ಅರಿಯದ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ; ಅವರನ್ನಾದರೂ ನಿಮಗೆ ತಂದು ಒಪ್ಪಿಸೇನು; ಮನಸ್ಸು ಬಂದಂತೆ ಮಾಡಬಹುದು; ಆದರೆ ಆ ಮನುಷ್ಯರು ನನ್ನ ಆಶ್ರಯಕ್ಕೆ ಬಂದವರು; ಅವರಿಗೆ ಏನೂ ಮಾಡಕೊಡದು ಎಂದು ಹೇಳಲು ಅವರು–ದಾರಿ ಬಿಡು ಎಂದು ಹೇಳಿ–ಇವನು ಯಾರೂ ಪರದೇಶಿ ಯಾಗಿ ಬಂದು ಈಗ ನ್ಯಾಯಹೇಳುವವನಾಗಬೇಕೋ; ಆ ಮನುಷ್ಯರಿಗೆ ಕೇಡು ಮಾಡುವುದಕ್ಕಿಂತ ಹೆಚ್ಚಾಗಿ ನಿನಗೆ ಕೇಡುಮಾಡುತ್ತೇವೆ ಎಂದು ಹೇಳಿ ಲೋಟನ ಮೇಲೆ ಬಿದ್ದು ಬಹಳವಾಗಿ ಇರುಕಿಸಿ ಕದವನ್ನು ಒಡೆದು ಬಿಡಬೇಕೆಂದಿದ್ದರು.ಆದರೆ ಒಳಗಿದ್ದ ಆ ಮನುಷ್ಯರು ಕೈಚಾಚಿ ತಮ್ಮ ಕಡೆಗೆ ಮನೆಯೊಳಗೆ ಸೇರಿಸಿ ಕದಮುಚ್ಚಿದರು”(ಆದಿ 19:4–10). ಆಗ ದೇವ ದೂತರು ಬಂದ ಉದ್ದೇಶವನ್ನು ಲೋಟನಿಗೆ ವಿವರಿಸಿ ಹೇಳಿದರು.

“ಹೊತ್ತು ಮೂಡುವುದಕ್ಕೆ ಮುಂಚೆ ಆ ದೂತರು ಲೋಟನಿಗೆ–ನೀನೆದ್ದು ಇಲ್ಲಿರುವ ನಿನ್ನ ಹೆಂಡತಿಯನ್ನೂ ನಿನ್ನ ಇಬ್ಬರು ಮಕ್ಕಳನ್ನೂ ಬೇಗ ಕರಕೊಂಡು ಹೋಗು; ಊರಿಗೆ ಉಂಟಾಗುವ ದಂಡನೆಯಿಂದ ನಿನಗೂ ನಾಶಉಂಟಾದೀತು ಎಂದು ಹೇಳಿ ತ್ವರೆಪಡಿಸಿದನು”(ಆದಿ19:5).

“ಲೋಟನು ಚೋಗರಿಗೆ ಮುಟ್ಟುವಷ್ಟರಲ್ಲಿ ಸೂರ್ಯನು ಮೂಡುದನು. ಆಗ ಯೆಹೋವನು ಸೊದೋಮ್ ಗೊಮೋರಗಳ ಮೇಲೆ ಆಕಾಶದಿಂದ ಅಗ್ನಿಗಂಧಕಗಳನ್ನುಸುರಿಸಿ ಆ ಪಟ್ಟಣಗಳನ್ನೂ ಸುತ್ತಲಿರುವ ಸೀಮೆಯೆಲ್ಲವನ್ನೂ ಊರುಗಳಲ್ಲಿದ್ದ ಜನರೆಲ್ಲರನ್ನೂ ಭೂಮಿಯ ಮೇಲಣ ಎಲ್ಲಾ ಬೆಳೆಗಳನ್ನೂ ಹಾಳುಮಾಡಿದನು”(ಆದಿ19:23–25).

ಪ್ರಾರಂಭದಿಂದಲೂ ದೇವರು ಆದಾಮ,ಅವ್ವಳು ಇವರ ಅವಿಧೇಯತೆಯಿಂದ ಏದೇನು ತೋಟದಿಂದ ಹೊರಗೆ ಹಾಕಿದನು ಮತ್ತು ನೋಹಾನ ಆತನ ಕುಟುಂಬ ಹಾಗು ನಾವೆಯಲ್ಲಿ ಸೇರಿಸಲ್ಪಟ್ಟ ಪ್ರಾಣಿಗಳು ಹೊರತು ಉಳಿದ ಪ್ರಜೆಗಳೆಲ್ಲರನ್ನೂ ಅವರ ದುಷ್ಟತ್ವ,ದುಷ್ಟಮನಸ್ಸು, ಕೆಟ್ಟ ಹೃದಯದವರನ್ನು ಜಲಪ್ರಳಯದಿಂದ ನಾಶ ಮಾಡಿದನು ಮತ್ತು ಈಗ ಸೊದೋಮ್ ಪಟ್ಟಣದ ಜನರ ಭಯಂಕರವಾದ ಪಾಪದಿಂದ ಅವರನ್ನು ಅಗ್ನಿಗಂಧಕದಿಂದ ನಾಶ ಮಾಡಿದನು.ಅವಿಧೇಯರು,ದುಷ್ಟ ಹೃದಯವುಳ್ಳವರು ದೇವರಿಂದ ಸಂಹರಿಸಲ್ಪಡುವರು ಮತ್ತು ಇಂತಹ ಕೃತ್ಯಗಳನ್ನು ಮಾಡುವವರೇಲ್ಲನ್ನೂ ಅವರ ಅವಿಧೇಯತೆ,ದುಷ್ಟತ್ವದಿಂದ ಮಾರು ಮನಸ್ಸು ಹೊಂದದಿದ್ದರೆ ದೇವರು ಅವರನ್ನೂ ನಾಶ ಮಾಡುವನು.

ಆದ್ದರಿಂದ ಪಾಪದಲ್ಲಿರುವುದಾದರೆ ನಾಶವಾಗುವಿರಿ ಎಂದು ಯೇಸು ಕ್ರಿಸ್ತನು ಹೇಳಿದ್ದಾನೆ ಮತ್ತು ಘೋರ ಪಾಪದಿಂದ ನಾವು ಬಿಡುಗಡೆ ಹೊಂದಬೇಕು.

ಪ್ರಶ್ನೆಗಳು:

1.ಯಾವ ರೀತಿಯಾದ ಪಾಪವು ಕಂಡುಬಂದದ್ದರಿಂದ ದೇವರು ಸೊದೋಮ್ ಪಟ್ಟಣವನ್ನು ನಾಶ ಮಾಡಲು ತೀರ್ಮಾನಿಸಿದನು.

A.ಘೋರವಾದ ಪಾಪ

B.ದೆವ್ವಗಳನ್ನು ಆರಾಧಿಸುವುದು

C.ಸ್ವಲಿಂಗ ಸಂಪರ್ಕ

2.ಯೊರ್ದನ್ ಹೊಳೆಸುತ್ತಲಿನ ಪ್ರಾಂತ್ಯವನ್ನು ಲೋಟನು ಆಯ್ದು ಕೊಳ್ಳಲು ಕಾರಣವೇನು?

A.ಸೊದೋಮ್ ಗೊಮೋರ ಪಟ್ಟಣದಲ್ಲಿ ಜೀವಿಸುವುದಕ್ಕೆ

B.ವ್ಯಾಜ್ಯಗಳು ಮುಂದುವರಿಯುತ್ತವೆ ಎಂದು ಅಲೋಚಿಸಿ ಆತನು ಅಬ್ರಹಾಮನಿಗೆ ದೂರ ಇರಬೇಕು ಅಂದು ಕೊಂಡನು.

C.ಆ ಪಟ್ಟಣವೆಲ್ಲಾ ಬಹಳ ಸುಂದರವಾಗಿದ್ದರಿಂದ.

D.ಬೈಬಲ್ ನಲ್ಲಿ ಹೇಳಿಲ್ಲ.

3.ಮನುಷ್ಯರ ಅವಿಧೇಯತೆಗೆ ದೇವರಿಂದ ಬಂದ ಪ್ರತಿಫಲ

A.ಏದೇನು ತೋಟದಿಂದ ಹೊರಗೆ ಹಾಕುವುದು.

B.ನೋಹಾನನ ಕಾಲದಲ್ಲಿ ಜಲಪ್ರಳಯದಿಂದ ನಾಶನ.

C.ಸೊದೋಮ್ ಗೊಮೋರ ಪಟ್ಟಣದ ನಾಶ.

4.ಲೋಟನನ್ನುದರ್ಶಿಸಿದ ದೇವ ದೂತರು(ಮನುಷ್ಯರು)ರನ್ನು ನಾಶ ಮಾಡುವುದಕ್ಕೆ ಪ್ರಯತ್ನಿಸಿದ ಆ ಪಟ್ಟಣದಲ್ಲಿನ ಪುರುಷರು ಮಾತ್ರ ನಾಶವಾದರು.

A.ಸರಿ B.ತಪ್ಪು

**5.ಸೊದೋಮ್ ಗೊಮೋರ ಪಟ್ಟಣದಲ್ಲಿ ವಾಸಿಸುವ ನೀತಿವಂತರನ್ನು ರಕ್ಷಿಸುವುದಕ್ಕೆ ಅಬ್ರಹಾಮನು ದೇವರನ್ನು ಬೇಡಿ ಕೊಂಡನು.**

**A.ಸರಿ** **B.ತಪ್ಪು**

***

## ದಾಸತ್ವ

## (ವಿಮೋಚನಕಾಂಡ1–12)

## ಪಾಠ–6

ಅಬ್ರಹಾಮನು ಕಲ್ದಿಯರ ಪಟ್ಟಣವಾದ ಊರ್ ಪ್ರಾಂತ್ಯದಲ್ಲಿ ವಾಸಿಸುತ್ತಿರುವಾಗ ದೇವರು ತೋರಿಸಿದ ದೂರ ದೇಶಕ್ಕೆ ಹೋಗುವುದಕ್ಕೆ ಕರೆದನು.ಆಗ ಆತನು ಇರಿವುದಕ್ಕೆ ಸ್ವಂತ ಮನೆ ಕೂಡ ಇರಲಿಲ್ಲ ಆದರೆ ಆತನ ಸಂತಾನವು ಒಂದು ದಿನ ವಾಗ್ದಾನ ದೇಶದ ಮನೆಯ ವಾರಸು ದಾರರಾಗುತ್ತಾರೆ.ಚರಿತ್ರೆಯಲ್ಲಿ ಕೆಲವು ಕಾಲಗಳ ನಂತರ ಅಬ್ರಹಾಮನ ಸಂತಾನವು ಐಗುಪ್ತದೇಶದಲ್ಲಿ ದಾಸತ್ವದಲ್ಲಿರುತ್ತಾರೆ.ದೇವರು ಮೋಶೆ ಮುಖಾಂತರ ಅವರನ್ನು ದಾಸತ್ವದಿಂದ ಬಿಡುಗಡೆಮಾಡಿ ವಾಗ್ದಾನ ದೇಶಕ್ಕೆ ಅಂದರೆ ಅಬ್ರಹಾಮ ಎದುರು ನೋಡುತ್ತಿದ್ದ ದೇಶಕ್ಕೆ ಹೋಗುವುದಕ್ಕೆ ಅವರನ್ನು ನಡೆಸಿದನು.ಪಾಪವೆಂಬ ದಾಸತ್ವದಲ್ಲಿ ಭೂಮಿ ಮೇಲೆ ಜೀವಿಸುತ್ತಿರುವ ನಮ್ಮ ಜೀವಿತಕ್ಕೆ ಇದು ಸಾದೃಷ್ಯವಾಗಿದೆ. ದೇವರು ಕ್ರಿಸ್ತನ ಮೊಲಕ ನಮಗೆ ಪಾಪವೆಂಬ ದಾಸತ್ವದಿಂದ ಬಿಡಿಸಿ ಪರಲೋಕವೆಂಬ ಮನೆಗೆ ನಡೆಸುವವನಾಗಿದ್ದಾನೆ.

ಯಾಕೋಬನ ಮಕ್ಕಳಲ್ಲಿ ಕೊನೆಯವನಾದ ಯೋಸೇಫನ ಬಳಿಯಲ್ಲಿ ತನ್ನ ಅಣ್ಣಂದಿರು ಮಾಡಿದ ದುರುದ್ದೇಶಗಳು, ಅವರು ಮಾಡಿದ ಕಾರ್ಯಗಳೂ ಅಂದರೆ ಆತನನ್ನು ಅವರು ಅಬ್ರಹಾಮನ ಬೇರೊಂದು ಮಗನ ಸಂತಾನದ ಪ್ರಜೆಗಳಾದ ಇಷ್ಮಾಯೇಲರಿಗೆ ಮಾರಿದ ನಂತರ ಆ ದೂರ ದೇಶವಾದ ಐಗುಪ್ತಕ್ಕೆ ಅವರ ಪ್ರಯಾಣ ಪ್ರಾರಂಬವಾಯಿತು.ಒಬ್ಬ ಸಾಮಾನ್ಯ ದಾಸನನ್ನಾಗಿ ಆತನನ್ನು ಮಾರಿದರು.ಒಂದು ದುಷ್ಟ ಮೃಗವು ಅವನನ್ನು ಸಾಯಿಸಿತು ಎಂದು ಅವರ ತಂದೆಯಾದ ಯಾಕೋಬನಿಗೆ ಸುಳ್ಳು ಹೇಳಿದರು,ಮೋಸಮಾಡಿದರು ಗಮನಿಸಿ..... ಯಾಕೋಬನು ಸಹಾ ತನ್ನ ತಂದೆಯನ್ನು ಮೋಸಮಾಡಿದನು.ಐಗುಪ್ತದಲ್ಲಿ ಯೋಸೇಫನು ತನ್ನ ನಂಬಿಕೆಯನ್ನು ಕಾಪಾಡಿಕೊಂಡನು ಮತ್ತು ಅಬ್ರಹಾಮನ ಸಂತಾನದಿಂದ ಒಂದು ಜನಾಂಗವನ್ನು ಸೃಷ್ಟಿಸುವುದಕ್ಕೆ ದೇವರು ಯೋಸೇಫನನ್ನು ಉಪಯೋಗಿಸಿಕೊಂಡನು. ಹೀಗೆ ಯೋಸೇಫನ ಮೊಲಕ ಐಗುಪ್ತ ಪ್ರವೇಶಿಸಿದ ಇಸ್ರಾಯೇಲರು ನಿಜವಾದ ದೇವರನ್ನು ಬಿಟ್ಟು ಸೃಷ್ಟಿಯನ್ನು ಆರಾಧಿಸುವ ಪ್ರಜೆಗಳ ಮದ್ಯೆ ಅನೇಕ ದಿನಗಳು ದಾಸತ್ವದಲ್ಲಿದ್ದರು.

ಹೀಗೆ ಐಗುಪ್ತದಲ್ಲಿ 400ವರ್ಷಗಳ ಕಾಲ ದಾಸತ್ವದ ನಂತರ ಮೋಶೆ ಜನ್ಮಿಸಿದನು.ಗಂಡು ಮಕ್ಕಳನ್ನು ಸಾಯಿಸುವುದಕ್ಕೆ ಫರೋಹನು ಆಜ್ಞಾಪಿಸಲಾಗಿ ಆ ಆಜ್ಞೆಗೆ ಭಯಪಟ್ಟು ಮೋಶೆ ತಂದೆ ತಾಯಿಗಳು ತಮ್ಮ ಮಗನನ್ನು ಫರೋನಿಂದ ಬಚ್ಚಿಟ್ಟರು.ಫರೋಹನ ಅಜ್ಞೆಗಳಿಗೆ ಒಳಗಾಗುವುದಕ್ಕಿಂತ ಯಥಾರ್ಥವಾಗಿ ದೇವರ ಆಜ್ಞೆಗಳಿಗೆ ಒಳಗಾಗುವುದಕ್ಕೆ ಅವರು ಮನಸ್ಸು ಮಾದಿದರು. ಫರೋಹನ ಆಜ್ಞೆಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ.

"ಮೋಶೆ ಹುಟ್ಟಿದಾಗ ಆತನ ತಂದೆ ತಾಯಿಗಳು ಕೂಸು ಸುಂದರವಾಗಿದೆ ಎಂದು ನೋಡಿ ಅರಸನ ಅಪ್ಪಣೆಗೆ ಭಯಪಡದೇ ನಂಬಿಕೆಯಿಂದಲೇ ಅವನನ್ನು 3ತಿಂಗಳು ಬಚ್ಚಿಟ್ಟರು"(ಇಬ್ರಿಯ11:23).

ಮೋಶೆ ತಾಯಿ ತನ್ನ ಮಗನನ್ನು ಜಂಬು ಹುಲ್ಲಿನ ಪೆಟ್ಟಿಗೆಯಲ್ಲಿ ಮಲಗಿಸಿ ನದಿಯ ಬಳಿಯಲ್ಲಿ ಇಟ್ಟಳು.ಫರೋಹನ ಮಗಳು ಸ್ನಾನಕ್ಕಾಗಿ ಆ ನದಿಯ ಬಳಿಗೆ ಇಳಿದು ಬಂದಳು. ಪೆಟ್ಟಿಗೆಯನ್ನು ಕಂಡು ದಾಸಿಯನ್ನು ಕಳುಹಿಸಿ ತರಿಸಿದಳು ತೆರೆದು ಆ ಕೂಸನ್ನು ಕಂಡು ಕನಿಕರಪಟ್ಟಳು.ಆ ಕೂಸು ನೋಡಿದಾಗ "ಫರೋಹನ ಮಗಳು  ಅವಳಿಗೆ ಈ ಮಗುವನ್ನು ತೆಗೆದುಕೊಂಡು ಹೋಗಿ ನನಗೋಸ್ಕರ ಸಾಕಮ್ಮ.... ನಾನೆ ನಿನಗೆ ಸಂಬಳವನ್ನು ಕೊಡುವೆನೆಂದು ಹೇಳಲಾಗಿ ಆ ಸ್ತ್ರೀ ಕೂಸನ್ನು ತೆಗೆದುಕೋಂಡು ಸಾಕಿದಳು ಅ ಹುಡುಗನು ಬೆಳೆದಾಗ ಅವನನ್ನು ಫರೋಹನ ಮಗಳ ಬಳಿಗೆ ತೆಗೆದುಕೊಂಡು ಬಂದಳು. ಅವನು ಆಕೆಗೆ ಮಗನಾದನು ಇವನನ್ನು ನೀರಿನೊಳಗಿನಿಂದ ಎಳೆದಿದ್ದೇನೆ ಎಂದು ಹೇಳಿ ಆಕೆ ಅವನಿಗೆ ಮೋಶೆ ಎಂದು ಹೆಸರಿಟ್ಟಳು"(ವಿಮೋ2:9–10).

ಹೀಗೆ ಮಗು ಫರೋಹನ ಮಗಳ ಮಗನಾಗಿ ರಾಜ ಮಂದಿರದಲ್ಲಿ ಬೆಳೆದು ದೊಡ್ಡವನಾದನು."ಮೋಶೆ ದೊಡ್ಡವನಾದ ಮೇಲೆ ಫರೋಹನ ಕುಮಾರ್ತೆಯ ಮಗನೆನಿಸಿಕೊಳ್ಳುವುದು ಬೇಡವೆಂದದ್ದು ನಂಬಿಕೆಯಿಂದಲೇ.ಸ್ವಲ್ಪಕಾಲ ಪಾಪಭೋಗಗಳನ್ನು ಅನುಭವಿಸುವುದಕ್ಕಿಂತ ದೇವಜನರೊಂದಿಗೆ ಕಷ್ಟವನ್ನು ಅನುಭವಿಸುವಿದೇ ಒಳ್ಳೆದೆಂದು ಕೊಂಡು ಐಗುಪ್ತದೇಶದ ಸರ್ವ ಐಶ್ವರ್ಯಕ್ಕಿಂತಲೂ ಕ್ರಿಸ್ತನ ನಿಮಿತ್ತ ಉಂಟಾಗುವ ನಿಂದೆಯೇ ಶ್ರೇಷ್ಟ ಭಾಗ್ಯವೆಂದೆಣಿಸಿ ಕೊಂಡನು ಯಾಕೆಂದರೆ ಬರುವ ಪ್ರತಿಫಲದ ಮೇಲೆ ಕಣ್ಣಿಟ್ಟಿದ್ದನು. ಅವನು ಅರಸನ ರೌದ್ರಕ್ಕೆ ಭಯಪಡದೇ ಐಗುಪ್ತ ದೇಶವನ್ನು ಬಿಟ್ಟು ಹೋದದ್ದು ನಂಬಿಕೆಯಿಂದಲೇ"(ಇಬ್ರಿಯ11:24–27).

ದೇವರು ಐಗುಪ್ತದೇಶದಲ್ಲಿ 40 ವರ್ಷಗಳ ಕಾಲ ಎಲ್ಲಾ ವಿದ್ಯೆಗಳಿಂದ ರತಬೇತಿ ಹೊಂದಿದ ನಂತರ ಪುನಃ 40 ವರ್ಷಗಳು ಕುರಿಕಾಯುವ ತರಬೇತಿಯನ್ನು ಕೊಟ್ಟು ಅಬ್ರಹಾಮ, ಇಸ್ಸಾಕ ಮತ್ತು ಯಾಕೋಬರಿಗೆ ವಾಗ್ದಾನ ಮಾಡಿದ ದೇಶಕ್ಕೆ ಸೇರಿಸುವುದಕ್ಕೆ, ಇಸ್ರಾಯೇಲರನ್ನು ದಾಸತ್ವದಿಂದ ಬಿಡಿಸುವುದಕ್ಕೆ ಮೋಶೆಯನ್ನು ಆಯ್ದುಕೊಂಡನು.ಈ ದಾಸತ್ವದಿಂದ ಅವರಲ್ಲಿ ವಿಧೇಯತೆ, ವಿಶ್ವಾಸದಲ್ಲಿ ದೋಷವಿದ್ದರಿಂದ ಇಸ್ರಾಯೇಲರು ವಾಗ್ದಾನ ದೇಶಕ್ಕೆ ಸೇರಲು 40 ವರ್ಷಗಳು ಹಿಡಿಯಿತು.

ದೇವರ ಕೃಪೆಯಿಂದ  ಆ ವಾಗ್ದಾನ ಭೂಮಿ(ದೇಶ)ಯನ್ನು ಕೊಟ್ಟರೂ ಸಹಾ ಅದನ್ನು ವಶಪಡಿಸಿಕೊಳ್ಳುವುದಕ್ಕೆ ಶತ್ರುಗಳೊಂದಿಗೆ ಹೋರಾಡ ಬೇಕಾಯಿತು. ಪ್ರಸ್ತುತ ಈಗಿನ ಮನುಷ್ಯರು ಪಾಪದಲ್ಲಿ ಬಂಧಿತರಾಗಿದ್ದಾರೆ ಕ್ರಿಸ್ತನ ರಕ್ತದ ಮೂಲಕ ನಾವು ಪಾಪದಿಂದ ಬಿಡುಗಡೆ ಹೊಂದುತ್ತಿದ್ದೇವೆ. ನಮ್ಮ ವಿಶ್ವಾಸ ಮತ್ತು ವಿಧೇಯತೆ ಸ್ಥಿರವಾಗಿ ಮಂದುವರಿಸುತ್ತಾ ನಮಗೆ ವಾಗ್ದಾನ ಮಾಡಿರುವ ದೇಶವನ್ನು ಅಂದರೆ ಪರಲೋಕಕ್ಕೆ ಸೇರಬಹುದು. ಅದಕ್ಕೆ ನಾವು ಸಹಾ ನಿತ್ಯವೂ ಈ ಲೋಕದ ಜೀವನದಲ್ಲಿ ಶತ್ರುಗಳೊಂದಿಗೆ ಹೋರಾಡುತ್ತಿದ್ದೇವೆ.

ಪ್ರಶ್ನೆಗಳು:

1.ಮೋಶೆ ದಾಸತ್ವದಲ್ಲಿ ಹುಟ್ಟಿದನು ಅದರೆ ಐಗುಪ್ತದ ರಾಜ ಫರೋಹನ ಮೊಮ್ಮಗನಾಗಿ ಬೆಳೆದನು.

A.ಸರಿ  B.ತಪ್ಪು

2.ಮೋಶೆ ಫರೋಹನ ಮೊಮ್ಮಗನಾಗಿ ಇರುವುದಕೆ ಯಾಕೆ ಇಷ್ಟಪಡಲಿಲ್ಲ?

A.ಬೇರೆಯವರ ಮಕ್ಕಳನ್ನು ಫರೋಹನು ಮೋಶೆಗಿಂತ ಚೆನ್ನಾಗಿ ನೋಡಿಕೊಳ್ಳುತ್ತಿದ್ದನು.

B.ಮೋಶೆ ಹುಟ್ಟಿದ ಕುಟುಂಬವನ್ನು ಫರೋ ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ.

C.ದೇವರ ಮೇಲೆ ನಂಬಿಕೆ ಇರುವುದರಿಂದ.

3.ದೇವರು ಐಗುಪ್ತದಲ್ಲಿ ದಾಸತ್ವದಲ್ಲಿ ಇದ್ದವರಿಗೆ ಕಾನಾನ್ ದೇಶವನ್ನು ಕೊಟ್ಟರೂ ಸಹಾ ಅವರು ವಾಗ್ದಾನ ದೇಶಗೋಸ್ಕರ ಏನೂ ಮಾಡಲಿಲ್ಲ.

A.ಸರಿ  B.ತಪ್ಪು

4.ಪ್ರಸ್ತುತ ದಿನಗಳಲ್ಲಿ ಪಾಪದಲ್ಲಿರುವ ಮನುಷ್ಯರಿಗೆ ವಾಗ್ದಾನ ಮಾಡಿರುವ ಅತ್ಮಸಂಭಂದವಾದ ದೇಶ,ಅಂದರೆ ಪರಲೋಕವನ್ನು ಸೇರುವುದಕ್ಕೆ  ಅವರು ಏನು ಮಾಡಬೇಕು?

A.ದೇವರಲ್ಲಿ ರಕ್ಷಣೆ ಹೊಂದಬೇಕು.

B.ಒಳ್ಳೆ ಕೆಲಸಗಳನ್ನು ಮಾಡಬೇಕು.

C. A ಮತ್ತು B

5.ಐಗಪ್ತದ ದಾಸತ್ವದಿಂದ ಇಸ್ರಾಯೇಲರನ್ನು ಬಿಡುಗಡೆ ಮಾಡುವುದಕ್ಕೆ ದೇವರು ಮೋಶೆಯನ್ನು ನೇಮಿಸುವುದಕ್ಕಿಂತ ಮುಂಚೆ ಆತನಿಗೆ ಸುಮಾರು 40ವರ್ಷಗಳು ತರಬೇತಿ ಹೊಂದಿ ಮತೇ 40ವರ್ಷಗಳ ಕುರಿಕಾಯುವ ಸೇವೆಯನ್ನು ಮಾಡಿದ ಮೇಲೆ ನೇಮಿಸಿದನು.

A.ಸರಿ B.ತಪ್ಪು

***

## ವಿಮೋಚನೆ

## (ವಿಮೋ13-14)

## ಪಾಠ-7

ಯುಕ್ತ ಸಮಯದಲ್ಲಿ ಮೋಶೆ ತಾಯಿಯು ಫರೋಹನ ಮಗಳ ಬಳಿಗೆ ಮೋಶೆಯನ್ನು ಕರೆದುಕೊಂಡು ಹೋದರು. "ಮೋಶೆ ಬೆಳೆದು ದೊಡ್ಡವನಾದ ಮೇಲೆ ಒಬ್ಬ ಐಗುಪ್ತನ ಮೇಲೆ ಮಾಡಿದ ಕಾರ್ಯಕ್ಕೆ ಭಯಪಟ್ಟು ಫರೋಹನನ್ನು ಬಿಟ್ಟು ಓಡಿ ಹೋಗಿ ಮಿದ್ಯಾನ್ ದೇಶದಲ್ಲಿ ಪ್ರವಾಸಿಯಾದನು. 40ವರ್ಷಗಳ ಕಾಲ ಆತನು ಅಲ್ಲಿ ಕುರಿ ಕಾಯುವವನಾಗಿ ತಗ್ಗಿಸಿಕೊಂಡು ಜೀವಿಸಿದನು.ಆ ನಂತರ ಅಬ್ರಹಾಮ,ಇಸ್ಸಾಕ,ಮತ್ತು ಯಾಕೋಬರಿಗೆ ವಾಗ್ದಾನ ಮಾಡಿದ ಇಸ್ರಾಯೇಲರನ್ನು ಬಿಡಿಸಿಕೊಂಡು ಬರಲು ದೇವರು ಆತನ್ನು ನೇಮಿಸಿನು. ಗಮನಿಸಿ....... ಆ ದಾಸತ್ವವು ಪ್ರಸ್ತುತ ನಮ್ಮ ಪಾಪವೆಂಬ ದಾಸತ್ವಕ್ಕೆ ಗುರುತಾಗಿದೆ.ಐಗುಪ್ತದವರನ್ನು ನಾಶಮಾಡುವುದಕ್ಕಿಂತ ಮುಂಚೆ ದೇವರಿಗೆ ಒಳಗಾಗುವುದಕ್ಕೆ ಹತ್ತು ಅವಕಾಶಗಳನ್ನು ಫರೋಹನಿಗೊ,ಐಗುಪ್ತರಿಗೊ ಕೊಟ್ಟನು. ದೇವರ ಶಕ್ತಿಯನ್ನು ಫರೋಹನು ಪರೀಕ್ಷಿಸಿ ಪ್ರತೀ ಅವಕಾಶಗಳನ್ನು ಸಹಜವಾಗಿ ತೆಗೆದುಕೊಂಡನು.ಆದ್ದರಿಂದ ಇಸ್ರಾಯೇಲರು ಐಗುಪ್ತದಿಂದ ಹೋಗುವುದಕ್ಕೆ ಒಪ್ಪಿದನು,ಕೊಡಲೇ ಮನಸ್ಸು ಬದಲಾಯಿಸಿಕೊಂಡು ಅವರನ್ನು ಮತ್ತೇ ದಾಸತ್ವಕ್ಕೆ ಇಟ್ಟುಕೊಳ್ಳುವುದಕ್ಕೆ ಎಳಕೊಂಡು ಹೋದನು.

ಇಸ್ರಯೇಲರು ಐಗುಪ್ತವನ್ನು ದಾಟಿದ ಮೇಲೆ ಕೆಂಪು ಸಮುದ್ರದ ಹತ್ತಿರಕ್ಕೆ ಬಂದರು ದೇವರಿಗೆ ಒಳಗಾಗುವುದೊ ಅಥವಾ ದಾಸತ್ವಕ್ಕೆ ಒಳಗಾಗುದೊ ಎಂಬುದನ್ನು ತೀರ್ಮಾನಿಸುವುದಕ್ಕೆ ಇಸ್ರಯೇಲರಿಗೆ ಇದು ತಕ್ಕ ಸಮಯ. ಅವರು ಕೆಂಪು ಸಮುದ್ರವನ್ನು ದಾಟುವ ಸಮಯದಲ್ಲಿ ಅವರು ದಾಸತ್ವದಿಂದ ಬಿಡುಗಡೆ ಹೊಂದಿ ಒಂದು ಹೊಸ ಜನಾಂಗವಾಗಿ ಸಮುದ್ರದ ದಡ ಸೇರಿದರು. ಗಮನಿಸಿ......... ಇದು ಪಾಪದಿಂದ ನಮ್ಮ ಬಿಡುಗಡೆಯನ್ನು ಸೋಚಿಸುತ್ತದೆ.ಶಿಲುಬೆಯ ಬಳಿಯಲ್ಲಿ ಒಂದು ನಿರ್ಣಯವನ್ನು ತೆಗೆದುಕೊಳ್ಳುವವರು ಮತ್ತು ಹೊಸ ಸೃಷ್ಟಿಯಾಗಿ ಬದಲಾಗುವುದಕ್ಕೆ, ಪಾಪವನ್ನು ನೀರಿನ ದೀಕ್ಷಾಸ್ನಾನದ ಮೂಲಕ ಸಮಾಧಿ ಮಾಡಬೇಕಾಗುತ್ತದೆ.

"ಕ್ರಿಸ್ತಯೇಸುವಿನಲ್ಲಿ ದೀಕ್ಷಾಸ್ಥಾನ ಮಾಡಿಸಿಕೊಂಡವರಾದ ನಾವೆಲ್ಲರೂ ಆತನ ಮರಣದಲ್ಲಿ ಪಾಲುಗಾರರಾಗುವುದಕ್ಕೆ ದೀಕ್ಷಾಸ್ಥಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೊ? ಹೀಗಿರಲಾಗಿ ನಾವು ದೀಕ್ಷಾಸ್ಥಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದ್ದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವಿತದಿಂದೆದ್ದು ಹೊಸಬರಾಗಿ ನಡೆದುಕೊಳ್ಳಬೇಕು.

ಹೇಗೆಂದರೆ ನಾವು ಆತನ ಮರಣಕ್ಕೆ ಸಾದೃಶ್ಯವಾದ ಮರಣವನ್ನು ಹೊಂದಿ ಆತನಲ್ಲಿ ಐಕ್ಯವಾಗಿದ್ದರೆ ಆತನ ಪುನರುತ್ಥಾನಕ್ಕೆ ಸಾದೃಶ್ಯವಾದ ಪುನರುತ್ಥಾನ ಹೊಂದಿ ಆಕತನಲ್ಲಿ ಐಕ್ಯವಾಗುವೆವು.ಪಾಪಾಧೀನ ಸ್ವಭಾವವು ನಾಶವಾಗಿ ನಾವು ಇನ್ನೂ ಪಾಪದ ವಶದಲ್ಲಿರದಂತೆ ನಮ್ಮ ಪೂರ್ವ ಸ್ವಭಾವವು ಕ್ರಿಸ್ತನಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ.ಸತ್ತವನು ಪಾಪದ ವಶದಿಂದ ಬಿಡುಗಡೆ ಹೊಂದಿದ್ದಾನಷ್ಟೆ"(ರೋಮ6:3–7).

ಆ ದಿನ ಇಸ್ರಾಯೇಲರ ದಾಸತ್ವದ ಸೆರೆಯಿಂದ ಬಿಡುಗಡೆ ಮಾಡುವುದರಲ್ಲಿ ಕೆಂಪು ಸಮುದ್ರದ ಹತ್ತಿರ ದೊಡ್ಡ ಕಾರ್ಯ ನಡೆಯಿತು.ಅದನ್ನು ಆಧಾರವಾಗಿರಿಸಿ ಕೊಂಡು ಈಗಿನ ಮನುಷ್ಯರೆಲ್ಲರಿಗೂ ಅವರ ಪಾಪಗಳಿಂದ ಬಿಡುಗಡೆ ಯಾಗುವುದಕ್ಕೆ ಶಿಲುಬೆಯ ಬಳಿಯಲ್ಲಿಯೂ ಸಹಾ ಒಂದು ಕಾರ್ಯ ನಡೆಯಿತು. ಈಗ ಕ್ರಿಸ್ತನಲ್ಲಿ ರಕ್ಷಣೆ ಹೊಂದಿದವರು ಆತನೊಂದಿಗೆ ಐಕ್ಯವಾಗಿದ್ದಾರೆ.

ಅವರ(ಇಸ್ರಾಯೇಲರು) ವಿಶ್ವಾಸವು ಬಲಹೀನ ವಾಗಿದ್ದರಿಂದ ಅವರು ಬೇಗ ಕಾನಾನ್ ದೇಶಕ್ಕೆ ಹೋಗದವರಾದರು ಹಾಗೂ ಯೆಹೋಶುವ ಮತ್ತು ಕಾಲೇಬನನ್ನು ಎದುರುಗೊಂಡು ದೇವರ ಮೇಲೆ ನಂಬಿಕೆ ಇಡಲಿಲ್ಲ. ಇದರ ಫಲಿತಾಂಶವಾಗಿ ಅವರು ವಾಗ್ದಾನ ದೇಶದ ಹತ್ತಿರದಲ್ಲೇ ಅರಣ್ಯದಲ್ಲಿ 40 ವರ್ಷಗಳ ಕಾಲ ಪ್ರಯಾಣ ಮಾಡಬೇಕಾಯಿತು.ಮತ್ತು ಆ ಎಲ್ಲರೂ ವಾಗ್ದಾನ ದೇಶಕ್ಕೆ ಸೇರದೆ ಹೋದರು; ಅವರಲ್ಲಿ ಯೆಹೋಶುವ ಮತ್ತು ಕಾಲೇಬು ಹೊರತು ಪುರುಷರೆಲ್ಲ ಸಾಯುವವರೆಗೂ ಅವರು ಅವರ ವಾಗ್ದಾನ ದೇಶವನ್ನು ಪ್ರವೇಶಿಸಲಿಲ್ಲ. ಮತ್ತು ಮೋಶೆಯನ್ನು ಸಹಾ ಕಾನಾನ್ ದೇಶ ಸೇರುವುದಕ್ಕೆ ದೇವರು ತಿರಸ್ಕರಿಸಿ ಅವನ ಬದಲಾಗಿ ಮೋಶೆಗೆ ನಂಬಿಗಸ್ಥನಾದ ಯೆಹೋಶುವನನ್ನು ದೇವರು ನೇಮಿಸಿದನು. ಅವರು ದೇವರ ಮೇಲೆ ನಂಬಿಕೆಯನ್ನು ಇಟ್ಟಿದ್ದರಿಂದ ಮತ್ತು ದೇವರಿಗೆ ಒಳಪಟ್ಟಿದ್ದರಿಂದ ಅವರನ್ನು ಅವರ ವಾಗ್ದಾನ ಹೊಂದಿದ ದೇಶದೊಳಗೆ ಪ್ರವೇಶಿಸಿದರು.

ನಾವು ಸಹ ದೇವರ ಮೇಲೆ ನಂಬಿಕೆ ಮತ್ತು ವಿಶ್ವಾಸವನ್ನಿರಿಸಿ ದೇವರೊಂದಿಗೆ ಸಮಾಧಾನ ಹೊಂದಿದರೆ ನಮ್ಮ ವಾಗ್ದಾನ ದೇಶಕ್ಕೆ ಅಂದರೆ ಪರಲೋಕಕ್ಕೆ ಸೇರಬಹುದು.

ಪ್ರಶ್ನೆಗಳು:

1. ದಾಸತ್ವದ ಭಂದನದಿಂದ ಇಸ್ರಾಯೇಲರನ್ನು ಬಿಡುಗಡೆ ಮಾಡುವುದರಲ್ಲಿ ಮೋಶೆ ದೇವರಿಗೋಸ್ಕರ ಎದುರು ನೋಡದೆ ತಾನೆ ಸ್ವಂತ ನಿರ್ಣಯದಿಂದ ಬಿಡುಗಡೆ ಮಾಡಬೇಕು ಎಂದು ಅಂದುಕೊಂಡನು.

    A.ಸರಿ          B.ತಪ್ಪು

2. ಮರಣ ಮತ್ತು ಪಾಪದಿಂದ ತಪ್ಪಿಸಿಕೊಳ್ಳುವುದಕ್ಕೆ ದೇವರು ಫರೋಹನಿಗೆ ಅವಕಾಶ ಕೊಡಲಿಲ್ಲ.

**A.**ಸರಿ **B.**ತಪ್ಪು

3.ದೇವರ ಮೇಲೆ ಇಸ್ರಾಯೇಲರಿಗೆ ನಂಬಿಕೆ ಇರುವುದರಿಂದ ದೇವರು ಅವರನ್ನು ಕೆಂಪು ಸಮುದ್ರ ನೀರಿನಲ್ಲಿ ನಡೆಸಿಕೊಂಡು ಅವರನ್ನು ದಡಕ್ಕೆ ಹೊಸ ಜನಾಂಗವನ್ನನಾಗಿ ಸೇರಿಸಿದನು.

**A.**ಸರಿ **B.**ತಪ್ಪು

4.ವಾಗ್ದಾನ ದೇಶಕ್ಕೆ ಪ್ರವೇಶಿಸಿದ ನಂತರ ಇಸ್ರಾಯೇಲರು ಯಾರ ಮೇಲೆ ನಂಬಿಕೆಯನ್ನು ಇಟ್ಟರು.

**A.**ಯೆಹೋಶುವ ಮತ್ತು ಕಾಲೇಬು

**B.**ಅವರ ಸ್ವಂತ ಸಾಮರ್ಥ್ಯದ ಮೇಲೆ

5. ಮೋಶೆಗೆ ದೇವರು ಎಲ್ಲಿಯವರೆಗೆ ಇಸ್ರಾಯೇಲರನ್ನು ನಡೆಸಿಕೊಂಡು ಬರುವುದಕ್ಕೆ ಅನುಮತಿಯನ್ನು ನೀಡಿದನು.

**A.**ವಾಗ್ದಾನ ದೇಶಕ್ಕೆ ಇಸ್ರಾಯೇಲರನ್ನು ಸೇರಿಸುವವರೆಗೆ

**B.**ವಾಗ್ದಾನ ದೇಶದಲ್ಲಿ ಪ್ರವೇಶಿಸಿದರು ಆದರೆ ಯೆಹೋಶುವನು ಮಂದೆ ನಡೆಸಿದನು.

**C.**ನೋಡಿದರು ಆದರೆ ವಾಗ್ದಾನ ದೇಶದಲ್ಲಿ ಪ್ರವೇಶಿಸಲಿಲ್ಲ.

***

## ಆಜ್ಞೆಗಳುಳ್ಳ ಕಲ್ಲಿನ ಹಲಗೆಗಳು
## (ವಿಮೋಚನಕಾಂಡ19–20)
## ಪಾಠ–8

ಅನೇಕ ವರ್ಷಗಳ ಹಿಂದೆ ದೇವರು ಅಬ್ರಹಾಮನೊಂದಿಗೆ ಮಾಡಿದ ವಾಗ್ದಾನವನ್ನು ನೆರವೇರಿಸುವುದಕ್ಕೆ ಅನೇಕ ಅದ್ಭುತಗಳ ಮೂಲಕ ಇಸ್ರಾಯೇಲರನ್ನು ಆಶೀರ್ವಾದಿಸಿದನು. ಅದರಲ್ಲಿ ಅನೇಕ ಜನರನ್ನು ದಾಸತ್ವದಿಂದ ಬಿಡಿಸಿ ವಾಗ್ದಾನ ದೇಶಕ್ಕೆ ಸೇರಿಸುವಂತದ್ದು ಮಹತ್ವದ ವಿಷಯವಾಗಿದೆ .

ದೇವರು ಅಬ್ರಹಾಮನೊಂದಿಗೆ ಮಾಡಿದ ವಾಗ್ದಾನದಿಂದ ಸುಮಾರ 400ವರ್ಷಗಳ ನಂತರ ಅವರು ಐಗುಪ್ತದಿಂದ ಪ್ರಯಾಣವನ್ನು ಪ್ರಾರಂಭಿಸಿದ ಮೂರನೆ ತಿಂಗಳಿನ ನಂತರ ಸಿನಾಯಿ ಬೆಟ್ಟಕ್ಕೆ ಬಂದು ನೆಲೆಸಿದರು. ಅಲ್ಲಿ ದೇವರು ಅವರಿಗೆ ಪ್ರತ್ಯಕ್ಷವಾದನು. ತನ್ನ ಆಜ್ಞೆಗಳನ್ನು ಮೋಶೆ ಮೂಲಕ ತಿಳಿಸಿದನು. “ಯೆಹೋವನು ಮೋಶೆಗೆ ನೀನು ಬೆಟ್ಟವನ್ನು ಹತ್ತಿಬಂದು ನನ್ನ ಹತ್ತಿರದಲ್ಲೇ ಇರು ನೀನು ಆ ಧರ್ಮಶಾಸ್ತ್ರವನ್ನೂ ಆಜ್ಞೆಗಳನ್ನೂ ಜನರಿಗೆ ಬೋಧಿಸುವಂತೆ ನಾನು ಅವುಗಳನ್ನು ಬರೆದಿರುವ ಶಿಲಾಶಸನಗಳನ್ನು ನಿನಗೆ ಕೊಡುತ್ತೇನೆ ಎಂದು ಹೇಳಿದನು”(ವಿಮೋ24:12).ಇವುಗಳನ್ನು ನಾವು ವಿಮೋಚನಕಾಂಡ20:1–17 ರಲ್ಲಿ ಬರೆದಿರುವ ಈ ಕೆಳಗಿನ ಹತ್ತು ಆಜ್ಞೆಗಳೊಂದಿಗೆ ಹೋಲಿಸಬಹುದು.

1.ಯೆಹೋವನು ಎಂಬ ನಿನ್ನ ದೇವರು ನಾನೆ ನಾನಲ್ಲದೆ ನಿನಗೆ ಬೇರೆ ದೇವರುಗಳು ಇರಬಾರದು.

2.ಯಾವ ಮೂರ್ತಿಯನ್ನೂ ಮಾಡಿಕೊಳ್ಳಬಾರದು.ಆಕಾಶದಲ್ಲಾಗಲಿ ಭೂಮಿಯಲ್ಲಾಗಲಿ ಭೂಮಿಯ ಕೆಳಗಣ ನೀರಿನಲ್ಲಾಗಲಿ ಇರುವ ಯಾವುದರ ರೂಪವನ್ನೂ ಮಾಡಿಕೊಳ್ಳಬಾರದು.ಅವುಗಳಿಗೆ ಅಡ್ಡಬೀಳಲೂ ಬಾರದು ಪೂಜೆ ಮಾಡಲೂ ಬಾರದು. ನಿನ್ನ ದೇವರಾದ ಯೆಹೋವನೆಂಬ ನಾನು ನನಗೆ ಸಲ್ಲತಕ್ಕ ಗೌರವವನ್ನು ಮತ್ತೊಬ್ಬರಿಗೆ ಸಲ್ಲಗೂಡಿಸದವನಾದ್ದರಿಂದ ನನ್ನನ್ನು ದ್ವೇಷಿಸುವವರ ವಿಷಯದಲ್ಲಿ ತಂದೆಗಳ ದೋಷಫಲವನ್ನು ಮಕ್ಕಳ ಮೇಲೆ ಮಾಡಿ ಮೂರು ನಾಲ್ಕು ತಲೆಮಾರುಗಳವರೆಗೂ ಬರಮಾಡುವವನಾಗಿಯೂ ನನ್ನನ್ನು ಪ್ರೀತಿಸಿ ನನ್ನ ಆಜ್ಞೆಗಳನ್ನು ಕೈ ಕೊಳ್ಳುವವರಿಗೋ ಸಾವಿರ ತಲೆಗಳವರೆಗೆ ದಯೆ ತೋರಿಸುವವನಾಗಿಯೂ ಇದ್ದೇನೆ.

3.ನಿನ್ನ ದೇವರಾದ ಯೆಹೋವನ ಹೆಸರನ್ನು ಅಯೋಗ್ಯ ಕಾರ್ಯಕ್ಕಾಗಿ ಎತ್ತಬಾರದು.ಯೆಹೋವನು ತನ್ನ ಹೆಸರನ್ನು ಅಯೋಗ್ಯ ಕಾರ್ಯಕಾಗಿ ಎತ್ತುವವನ್ನು ಶಿಕ್ಷಿಸದೆ ಬಿಡುವುದಿಲ್ಲ.

4. ಸಬ್ಬತ್ ದಿನವನ್ನು ದೇವರ ದಿನವೆಂದು ಆಚರಣಗೆ ತರುವುದಕ್ಕೆ ಜ್ಞಾಫಕದಲ್ಲಿಟ್ಟು ಕೊಳ್ಳಬೇಕು.ಆರು ದಿವಸಗಳಲ್ಲಿ ನೀನು ದುಡಿದು ನಿನ್ನ ಕಲಸವನ್ನೆಲ್ಲಾ ಮಾಡಬೇಕು.
ಏಳನೆಯ ದಿನವು ನಿನ್ನ ದೇವರಾದ ಯೆಹೋವನಿಗೆ ಮೀಸಲಾದ ವಿಶ್ರಾಂತಿ ದಿನವಾಗಿದೆ; ಅದರಲ್ಲಿ ನೀನು ಯಾವ ಕೆಲಸವನ್ನೂ ಮಾಡಬಾರದು. ನಿನ್ನ ಗಂಡು ಮಕ್ಕಳು ಹೆಣ್ಣು ಮಕ್ಕಳು ಗಂಡಾಳು ಹೆಣ್ಣಾಳು ಪಶುಗಳು ನಿನ್ನ ಊರಲ್ಲಿ ಇರುವ ದೇಶದವರು ಯಾವ ಕೆಲಸವನ್ನೂ ಮಾಡಬರದು. ಆರು ದಿವಸಗಳಲ್ಲಿ ಯೆಹೋವನು ಭೂಮ್ಯಾಕಾಶಗಳನ್ನೂ ಸಮುದ್ರವನ್ನೂ ಅವುಗಳಲ್ಲಿರುವ ಸಮಸ್ತವನ್ನೂ ನಿರ್ಮಾಣ ಮಾಡಿ ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡನು. ಆದದರಿಂದ ಯೆಹೋವನು ಸಬ್ಬತ್ ದಿನವನ್ನು ತನ್ನ ದಿನವಾಗಿರಲಿ ಎಂದು ಆಶೀರ್ವಾದಿಸಿದನು.

5.ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸಬೇಕು; ಸನ್ಮಾನಿಸಿದರೆ ನಿನ್ನ ದೇವರಾದ ಯೆಹೋವನು ನಿನಗೆ ಅನುಗ್ರಹಿಸುವ ದೇಶದಲ್ಲಿ ನೀನು ಬಹುಕಾಲ ಇರುವಿ.
6. ನರಹತ್ಯ ಮಾಡಬಾರದು
7.ವ್ಯಭಿಚಾರ ಮಾಡಬಾರದು
8.ಕದಿಯ ಬಾರದು
9.ಮತ್ತೊಬ್ಬನ ಮನೆಯನ್ನು ಆಶಿಸಬಾರದು
10.ಮತ್ತೊಬ್ಬನ ಹೆಂಡತಿ ಹಂಡಾಳು ಹೆಣ್ಣಾಳು ಎತ್ತು ಕತ್ತೆ ಮುಂತಾದ ಯಾವುದನ್ನು ಆಶಿಸಬಾರದು.

ಇವುಗಳನ್ನು ಪುನಃ ಓದಿರಿ.ನಿಯಮಗಳು ಸೂಚನೆಗಳೂ,ಆಜ್ಞೆಗಳೂ ಮಾಡಬೇಕಾದವುಗಳು ಮತ್ತು ಮಾಡಬಾರದ ಕೆಲಸಗಳನ್ನು ಇವುಗಳಲ್ಲಿ ಗುರುತಿಸಬಹುದು. ಕ್ಷಮಾಪಣೆ ಇಲ್ಲ ವಿಶ್ವಾಸವನ್ನು ಕುರಿತು ಯಾವುದಾದರು ಆಜ್ಞೆ ಹೇಳಲ್ಪಟ್ಟಿದೆ ಎಂದು ಗಮನಿಸಿದ್ದಿರಾ?ಅಥವಾ ಮನುಷ್ಯನ ಹೃದಯ,ಮನಸ್ಸು ಪ್ರವರ್ತನೆಯನ್ನು ಕುರಿತು ಒಂದೆರಡು ಆಜ್ಞೆಗಳು ಮಾತ್ರ ಇರುವುದನ್ನು ಗಮನಿಸಿದ್ದಿರಾ? ಈ ಒಡಂಬಡಿಕೆ ನಮಗೆ ಕ್ರಿಸನ ಹತ್ತಿರಕ್ಕೆ ತರುವುದಕ್ಕೆ ಹೇಳಲ್ಪಟ್ಟಿದೆ.ಮತ್ತು ಇಬ್ರಿಯ ಪತ್ರಿಕೆಯಲ್ಲಿ ಹೇಳಲ್ಪಟ್ಟಿರುವ ಪ್ರಕಾರ ಇದು ಹೊಸ ಒಡಂಡಿಕೆಯಲ್ಲಿ ಅಂದರೆ ದುಷ್ಟತ್ವಗಳಿಂದ ಕ್ಷಮಾಪಣೆ ನಿಬಂಧನೆಯಲ್ಲಿ ಪುನರುದ್ದರಿಸಲಾಗಿದೆ ಹೇಗೆಂದರೆ ಆ ಮೊದಲ ಒಡಂಬಡಿಕೆ ದೋಷವಿಲ್ಲದಾದರೆ ಎರಡನೇಯ ಒಡಂಬಡಿಕೆಗೆ ಅವಕಾಷವಿರುವುದಿಲ್ಲ. ಆದರೆ ದೇವರು ಆ ಒಡಂಬಡಿಕೆಗೆ ಸೇರಿದವರ ಮೇಲೆ ತಪ್ಪು ಹೋರಿಸಿ ಹೀಗೆಂದನು– “ಇಗೋ ನಾನು ಇಸ್ರಾಯೇಲ್ ವಂಶದವರೊಂದಿಗೂ ಯೆಹೂದ ವಂಶದವರೊಂದಿಗೂ ಹೊಸದಾಗಿರುವ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುವ ದಿನಗಳು ಬರುವವು ಎಂದು ಕರ್ತನು ಹೇಳುತ್ತಾನೆ ಈ ಒಡಂಬಡಿಕೆಯು ನಾನು ಇವರ ಪಿತೃಗಳನ್ನು ಕೈ ಹಿಡಿದು ಐಗುಪ್ತ ದೇಶದೊಳಗಿಂದ ಕರಕೊಂಡು ಬಂದ ಕಾಲದಲ್ಲಿ ಅವರ ಸಂಗಡ ಮಾಡಿಕೊಂಡ ಒಡಂಬಡಿಕೆಯಂಥದ್ದಲ್ಲ ಅವರು

ನನ್ನ ಒಡಂಡಿಕೆಯಲ್ಲಿ ಸ್ಥಿರವಾಗಿ ನಿಲ್ಲಲಿಲ್ಲ ವಾದ್ದರಿಂದ ನಾನು ಅವರ ಚಿಂತೆಯನ್ನು ಬಿಟ್ಟೆನೆಂದು ಕರ್ತನು ಹೇಳುತ್ತಾನೆ"(ಇಬ್ರಿಯ8:7–9).

"ಆ ದಿನಗಳು ಬಂದ ಮೇಲೆ ನಾನು ಇಸ್ರಾಯೇಲ್ ವಂಶದವರೊಂದಿಗೆ ಮಾಡಿಕೊಳ್ಳುವ ಒಡಂಬಡಿಕೆಯು ಹೀಗಿರುವುದು – ನನ್ನ ಆಜ್ಞೆಗಳನ್ನು ಅವರ ಮನಸಿನಲ್ಲಿ ಇಡುವೆನು.ಅವರ ಹೃದಯದ ಮೇಲೆ ಅವುಗಳನ್ನು ಬರೆಯುವೆನು; ನಾನು ಅವರಿಗೆ ದೇವರಾಗಿರುವೆನು,ಅವರು ನನಗೆ ಪ್ರಜೆಯಾಗಿರುವರು; ಒಂದೇ ಊರಿನವರೂ ಅಣ್ಣ ತಂಮ್ಮಂದಿರೂ ಒಬ್ಬರಿಗೊಬ್ಬರು– ಕರ್ತನ ಜ್ಞಾನವನ್ನು ಪಡೆಯರಿ ಎಂದು ಬೋಧಿಸಬೇಕಾಗಿರುವುದಿಲ್ಲ; ಚಿಕ್ಕವರು ಮೊದಲುಗೊಂಡು ದೊಡ್ಡವರ ತನಕ ಎಲ್ಲರೂ ನನ್ನ ಜ್ಞಾನವನ್ನು ಪಡೆದಿರುವರು; ನಾನು ಅವರ ದುಷ್ಕೃತ್ಯಗಳ ವಿಷಯವಾಗಿ ಕ್ಷಮೆಯುಳ್ಳವನಾಗಿರುವೆನು,ಅವರ ಪಾಪಗಳನ್ನು ನನ್ನ ನೆನಪಿಗೆ ಎಂದಿಗೂ ತರುವುದಿಲ್ಲ ಎಂದು ಕರ್ತನು ನುಡಿಯುತ್ತಾನೆ.

ಇಲ್ಲಿ ಹೊಸ ಒಡಂಬಡಿಕೆಯೆಂದು ಹೇಳಿದ್ದರಲ್ಲಿ ಮೊದಲಿದ್ದದ್ದನ್ನು ಹಳೆದಾಗಿ ಮಾಡಿದ್ದಾನೆ. ಆದರೆ ಹಳೇದಾಗುತ್ತಾ ಮುದಿಯಾಗುವಂಥದಕ್ಕೆ ಅಂತ್ಯವು ಸಮೀಪವಾಗಿದೆ."(ಇಬ್ರಿ 8:10–13).

" ಆದೆರೆ ನೀವು ಮುಂಚೆ ಪಾಪಕ್ಕೆ ದಾಸರಾಗಿದ್ದರೂ ನಿಮಗೆ ಕಲಿಸಲ್ಪಟ್ಟ ಬೋಧನೆಗೆ ನೀವು ಮನಃ ಪೊರ್ವಕವಾಗಿ ಅಧೀನರಾದದರಿಂದಲೂ ಪಾಪದಿಂದ ಬಿಡುಗಡೆಯನ್ನು ಹೊಂದಿ ನೀತಿಗೆ ದಾಸರಾದದರಿಂದಲೂ ದೇವರಿಗೆ ಸ್ತೋತ್ರವಾಗಲಿ"(ರೋಮಾ 6:17–18).

" ಕ್ರಿಸ್ತನಂಬಿಕೆಯ ಕಾಲ ಬರುವುದಕ್ಕೆ ಮೊದಲು ನಾವು ಮಂದಕ್ಕೆ ಪ್ರಕಟವಾಗಬೇಕಾಗಿದ್ದ ಆ ನಂಬಿಕೆಗೆ ವಶವಾಗುವುದಕ್ಕಾಗಿ ಧರ್ಮಶಾಸ್ತ್ರದ ಕೈಕೆಳಗೆ ಕಾವಲಲ್ಲಿ ಮುಚ್ಚಲ್ಪಟ್ಟಿದ್ದೆವು. ಹೀಗಿರಲಾಗಿ ಧರ್ಮಶಾಸ್ತ್ರವು ನಮ್ಮನ್ನು ಕಾಯುವ ಆಳಿನಂತಾಗಿದೆ; ನಾವು ನಂಬಿಕೆಯಿಂದ ನೀತಿವಂತರೆಂಬ ನಿರ್ಣಯವನ್ನು ಹೊಂದುವುದಕ್ಕಾಗಿ ಕ್ರಿಸ್ತನಲ್ಲಿಗೆ ಸೇರುವ ತನಕ ಅದು ನಮ್ಮನ್ನು ಕಾಯುತ್ತದೆ. ಆದರೆ ಕ್ರಿಸ್ತನ ನಂಬಿಕೆಯು ಬಂದಿರಲಾಗಿ ನಾವಿನ್ನು ಕಾಯುವವನ ಕೈಕೆಳಗಿರುವವರಲ್ಲ."(ಗಲಾತ್ಯ 3:23–25).

"ಅಪಾರಾಧಗಳನ್ನು ಮಾಡುವುದರಿಂದಲು ಸುನ್ನತಿ ಇಲ್ಲದ ಶರೀರ ಭಾವದಿಂದಲು ಸತ್ತವರಾಗಿದ್ದ ನಿಮ್ಮನ್ನು ಸಹ ದೇವರು ಕ್ರಿಸ್ತನೊಂದಿಗೆ ಬದುಕಿಸಿದ್ದಾನೆ.ಆತನು ನಮ್ಮ ಅಪಾರಾಧಗಳೆನ್ನೆಲ್ಲಾ ಕ್ಷಮಿಸಿ ನಮ್ಮ ಮೇಲೆ ದೋಷಾರೋಪಾಣೆ ಮಾಡಿದಂಥ ಆಜ್ಞಾರೂಪವಾಗಿದ್ದಂಥ ಪತ್ರವನ್ನು ಕೆಡಿಸಿ ಅದನ್ನು ಶಿಲುಬೆಗೆ ಜಡಿದು ಇಲ್ಲದಂತಾಗ ಮಾಡಿದನು"(ಕೊಲೊಸ್ಸಿ 2:13–14).

"ಮರಣ ಶಾಸನವು ಇರುವಲ್ಲಿ ಅದನ್ನು ಬರೆಯಿಸಿದವನ ಮರಣವು ಪ್ರಸಿದ್ದವಾಗಿರಬೇಕಷ್ಟೆ. ಮರಣಶಾಸನವು ಮರಣವಾದ ಮೇಲೆ ನಡೆಯುವುದೇ ಹೊರತು ಬರೆಯಿಸಿದವನು ಜೀವದಿಂದಿರುವಾಗ ಎಂದಿಗೂ ಸಲ್ಲುವುದಿಲ್ಲ.ಹೀಗಿರಲಾಗಿ ಮೊದಲನೆಯ ಒಡಂಬಡಿಕೆಯಾದರು ರಕ್ತವಿಲ್ಲದೆ ಸ್ಥಾಪಿತವಾಗಲಿಲ್ಲ"(ಇಬ್ರಿ 9:16–18).

ಆದ್ದರಿಂದ "ನೀವು ಬಿಡುಗಡೆಯನ್ನುಂಟುಮಾಡುವ ಧರ್ಮಪ್ರಮಾಣದ ಪ್ರಕಾರ ತೀರ್ಮಾನವನ್ನು ಹೊಂದತಕ್ಕವರೆಂದು ಮಾತನಾಡಿರಿ, ನಡೆಯಿರಿ. ಕರುಣೆ ತೋರಿಸದೆ ಇರುವವನಿಗೆ ನ್ಯಾಯ ತಿರ್ಮಾನದಲ್ಲಿ ಕರುಣೆಯು ತೋರಿಸಲ್ಪಡುವುದಿಲ್ಲ.ಕರುಣೆಯು ನ್ಯಾಯ ತೀರ್ಮಾನವನ್ನು ಗೆದ್ದು ಹಿಗ್ಗುತ್ತದೆ"(ಯಾಕೋಬ 2:12–13)

ಪ್ರಶ್ನೆಗಳು:

1.ದೇವರು ಮೋಶೆಯನ್ನು ಕರೆದು ಬೆಟ್ಟದ ಮೇಲೆ ಧರ್ಮಶಾಸ್ತ್ರವನ್ನು ಎಲ್ಲಿಯವರೆಗೆ ಕೊಟ್ಟನು?

A.ಯಹೂದ್ಯರಿಗೆ ಮತ್ತು ಅನ್ಯರಿಗೆ ಕೊಟ್ಟನು.

B.ನಿತ್ಯವು ಇರುವುದಕ್ಕೆ ಇಸ್ರಾಯೇಲರಿಗೆ ಕೊಟ್ಟನು.

C.ಹೊಸ ಒಡಂಬಡಿಕೆ ಪ್ರಾರಂಬವಾಗುವವರೆಗೆ ಕೊಟ್ಟನು.

2.ಹತ್ತು ಆಜ್ಞೆಗಳು ಅಂದರೆ ಧರ್ಮಶಾಸ್ತ್ರವು ನಂಬಿಕೆಯ ಹತ್ತಿರಕ್ಕೆ ತರುವ ನಮಗೆ ಬಾಲ ಶಿಕ್ಷಕನು ಮತ್ತು ಉಪಧ್ಯಾಯದಂತಿದೆ.

A.ಸರಿ B.ತಪ್ಪು

3.ದೋಷವಿರುವ ಆ ನಿಭಂದನೆಗೆ ಬದಲಾಗಿ 2ನೇ ಒಡಂಬಡಿಕೆ ಅಂದರೆ ಯಾವುದನ್ನು ಹೇಳಲಾಗಿದೆ.

A.ಹೊಸ ಒಡಂಬಡಿಕೆ

B.ಹಳೆ ಒಡಂಬಡಿಕೆ

C.ಎರಡನ್ನೂ

4.ಧರ್ಮಶಾಸ್ತ್ರವು ಪಾಪ ಕ್ಷಮಾಪಣೆಗೆ, ರಕ್ಷಣೆಗೆ ಮತ್ತು ರಕ್ಷಿಸಲ್ಪಡುವುದಕ್ಕೆ ಕೊಡಲ್ಪಟ್ಟಿದೆ.

A.ಸರಿ B.ತಪ್ಪು

5.ದೇವರು ಧರ್ಮಶಾಸ್ತ್ರವನ್ನು ಕ್ರಿಸ್ತನ ಮರಣದೊಂದಿಗೆ ಶಿಲುಬೆಗೆ ಹಾಕಲ್ಪಟ್ಟಿದೆ.

A.ಸರಿ B.ತಪ್ಪು

***

## ದೇವರ ಹೃದಯಾನುಸಾರನ

## (1ಸಮುವೇಲ16,2ಸಮುವೇಲ7)

## ಪಾಠ–9

ಇಸ್ರಾಯೇಲರು ಐಗುಪ್ತದೇಶದಿಂದ ಬಿಡುಗಡೆ ಹೊಂದಿ ಹಾಲು ಜೇನು ಹರಿಯುವ ದೇಶವನ್ನು ಪ್ರವೇಶಿಸಿದ ನಂತರ ದೇವರ ಮೂಲಕ ಆಯ್ದುಕೊಂಡ ನ್ಯಾಯಸ್ಥಾಪಕರು ಇಸ್ರಾಯೇಲರನ್ನು ಪರಿಪಾಲನೆ ಮಾಡಿದರು ಆದರೆ ಅವರು(ಇಸ್ರಾಯೇಲರು) ಇತರೆ ದೇಶಗಳಂತೆ ನಮ್ಮನ್ನು ಆಳುವುದಕ್ಕೆ ಅರಸ(ರಾಜ) ಬೇಕೆಂದು ಕೇಳಿದರು.ದೇವರು ಅವರಿಗೆ ರಾಜನಾಗಿ ನಮ್ಮನ್ನು ಪರಿಪಾಲಿಸುತ್ತಾನೆ ಎನ್ನುವುದನ್ನು ಅವರು ಮರೆತು ಬಿಟ್ಟಿದ್ದರು. ಆದ್ದರಿಂದ ದೇವರು ಅವರನ್ನು ಪರಿಪಾಲಿಸಲು ಅವರಿಗೆ ಮೊದಲ ಅರಸನನ್ನಾಗಿ ಸೌಲನ್ನು ನೇಮಿಸಿದನು ಪ್ರಜೆಗಳು ಯಾವರೀತಿ ಹೇಳಿದರೂ ಆ ರೀತಿಯಾಗಿ ಪರಿಪಾಲನೆ ಮಾಡಿದನು.ಅತನು(ಸೌಲನು) ದೇವರಿಗೆ ಒಳಪಟ್ಟ ಸೇವಕರಾಗಿರದೇ ತನ್ನ ಸ್ವಂತ ಆಲೋಚನೆಯಿಂದ ಪರಿಪಾಲನೆ ಮಾಡಿದನು.ಆದ್ದರಿಂದ ಆತನ್ನು ತೆಗೆದು ಹಾಕಿ ಸಮುವೇಲನ್ನು ಕಳುಹಿಸಿ ದೇವರಿಗೆ ವಿಧೇಯನಾದ ದಾವೀದನನ್ನು 2ನೇ ಅರಸನನ್ನಾಗಿ ಅಭಿಷೇಕಿಸಿದನು.

ಸೌಲನು ದಾವೀದನ ಮೇಲೆ ಕೋಪಗೊಂಡು ಅನೇಕ ಸಾರಿ ದಾವೀದನನ್ನು ಸಾಯಿಸಲು ಹುಡುಕುತ್ತಿದ್ದನು ಇದರಿಂದ ದಾವೀದನು ತಪ್ಪಿಸಿಕೊಂಡು ಓಡಿ ಹೋಗುವ ಪರಿಸ್ಥಿತಿಗಳು ಎದುರಾದವು. ಆದರೂ "ಸೌಲನು ದೇವರಿಂದ ಅಭಿಷೇಕಿಸಿದ್ದವನೆಂದು" ತಳಿದು ದಾವೀದನು ಸೌಲನಿಗೆ ಯಾವ ಹಾನಿ ಮಾಡಲಿಲ್ಲ. ಸೌಲನು ಮರಣಿಸಿದ ನಂತರ ದಾವೀದನು ರಾಜನಾದನು ದಾವೀದನನ್ನು ಕುರಿತು ದೇವರು " ಇಷಯನ ಮಗನಾದ ದಾವೀದನು ನನಗೆ ಸಿಕ್ಕಿದನು,ಅವನು ನನಗೆ ಒಪ್ಪುವ ಮನುಷ್ಯನು,ಅವನು ನನ್ನ ಇಷ್ಟವನ್ನೇಲ್ಲ ನೆರವೇರಿಸುವನು ಎಂಬದಾಗಿ ಅವನ ವಿಷಯವಾಗಿ ಸಾಕ್ಷಿ ಹೇಳಿದನು.ಅವನ ಸಂತಾನದಿಂದ ದೇವರು ತನ್ನ ವಾಗ್ದಾನ ಪ್ರಕಾರ ಇಸ್ರಾಯೇಲರಿಗೆ ಒಬ್ಬ ರಕ್ಷಕನನ್ನು ಹುಟ್ಟಿಸಿದ್ದಾನೆ"(ಅ.ಕೃ13:22–23).

ಒಂದು ಸಂದರ್ಭದಲ್ಲಿ ದಾವೀದನು ಮತ್ತು ಆತನ ಮನುಷ್ಯರು ಬಹಳ ಐಶ್ವರ್ಯವಂತನ ಸಮೂಹದ ಮದ್ಯದಲ್ಲಿ ಇದ್ದರು. ಮತ್ತು ಅವರು ಆತನನ್ನು ರಕ್ಷಿಸುತ್ತಾ,ಬಹಳ ಗೌರವದಿಂದ ನೋಡಿಕೊಳ್ಳುತ್ತಿದ್ದರು. ಯಾವುದೂ ಆತನ ಸೇವಕರಿಗೆ ಸೇರಿದವುಗಳನ್ನು ತೆಗೆದು ಕೊಳ್ಳದೆ ಇದ್ದರು. ನಂತರ ದಾವೀದನು, ಆತನ ಮನುಷ್ಯರು  ಹಸಿವಿನಿಂದಿದ್ದಾಗ ದಾವೀದನು ಆಹಾರಗೋಸ್ಕರ ನಾಬಾಲು  ಸಹಾಯಗೋಸ್ಕರ ಮನವಿ ಮಾಡಿಕೊಂಡನು, ಆದರೆ ನಾಬಾಲು ಆತನ ವಿಷಯವಾಗಿ ತಳಿದವನಾಗಿ ಅಗೌರವ ಮಾಡಿ ಆತನ ಮನವಿಯನ್ನು ತಿರಸ್ಕರಿಸಿದನು.ದಾವೀದನು ಕೋಪಗೊಂಡು ಈತನ್ನು ಸಾಯಿಸಬೇಕೆಂದುಕೊಂಡನು ಆದರೆ ಮನಸ್ಸು ಬದಲಾಯಿಸಿ ಕೊಂಡನು. ದೇವರೆ ಆತನಿಗೆ ತೀರ್ಪುಮಾಡಲಿ ಎಂದು ಕೊಂಡನು.

ದಾವೀದನ ಜೀವಿತದಲ್ಲಿ ಎಲ್ಲಾ ವಿಷಯಗಳು ದೈವಿಕವಾದವುಗಳಲ್ಲ, ಸೈನ್ಯದೊಂದಿಗೆ ಯುದ್ದಕ್ಕೆ ಹೋಗದೇ ಮನೆಯಲ್ಲಿಯೇ ಇದ್ದನು. ಆಗ ಒಂದು ಸುಂದರವಾದ ಸ್ತ್ರೀಯನ್ನು ನೋಡಿ ಆಕೆಯೊಂದಿಗೆ ವೆಭಿಚಾರ ಮಾಡಿದನು. ಆತನಿಂದ ಆಕೆಯು ಗರ್ಭವನ್ನು ಧರಿಸಿದಳೆಂದು ತಿಳಿದು. ಆತನ ಪಾಪವನ್ನು ಮುಚ್ಚುವುದಕ್ಕೆ ಆಕೆಯ ಗಂಡನನ್ನು ಸಾಯಿಸುವುದಕ್ಕೆ ಸೈನಿಕರಿಗೆ ಆಜ್ಞಾಪಿಸಿದನು ಎಂಥ.....ಘೋರ? ಹೌದು....! ಇದು ದೇವರನ್ನು ಸಂತೋಷ ಪಡಿಸುವುದಾ? ಅಲ್ಲ....! ದಾವೀದನು ಮಾಂಸಯುಕ್ತವಾದ ಶಾರೀರಿಕ ಇಚ್ಚೆಗಳಿಗೆ ಮಾರು ಹೋದನು ಮತ್ತು ಶೋಧನೆಗೊಳಗಾಗಿ ಅದು ಪಾಪಕ್ಕೆ ಕಾರಣವಾಯಿತು.ಈ ಪಾಪದಿಂದ ದಾವೀನು ಬಹಳ ಚಿಂತಿಸಿದನು,ದೇವರ ಸೇವಕನಾದ ನಾತಾನನು ದಾವೀದನನನ್ನು ಎದುರುಗೊಂಡಾಗ ತನ್ನ ತಪ್ಪುಗಳನ್ನು, ಪಾಪವನ್ನು ಒಪ್ಪಿಕೊಂಡು ಮಾರು ಮನಸ್ಸು ಹೊಂದಿ ಕ್ಷಮಾಪಣೆ ಕೇಳಿಕೊಂಡನು.

ಆತನ್ನು ಕ್ಷಮಿಸಿದರೂ ತನ್ನ ಪಾಪ ಭರಿತವಾದ ಕಾರ್ಯಗಳ ಫಲಿತಾಂಶವನ್ನು ಅನುಭವಿಸುತ್ತಾ ಇದ್ದನು. "ನನ್ನ ಹೃದಯಾನು ಸಾರನು ಎಂದು ದೇವರು ದಾವೀದನನ್ನು ಕರಿತು ಹೇಳುವುದರ ಮೂಲಕ,ಆತನ ಹೃದಯ ವೈಖರ್ಯವು, ಆತನ ವೇಧನೆಗಳೂ ದೇವರೊಂದಿಗೆ ಸಮಾಧಾನ ಹೊಂದುವುದಕ್ಕೆ, ಕ್ಷಮಾಪಣೆ ಕೋರುವುದಕ್ಕೆ ಆತನ ಕೋರಿಕೆಯ ನಿಮಿತ್ತ ದೇವರು ತನ್ನ ಹೃದಯಾನು ಸಾರನು ಎಂದು ಹೇಳಿಕೊಂಡನು.

ಪ್ರಸ್ತುತ ಈಗಿನ ಪ್ರತಿಯೊಬ್ಬರ ಪರಿಸ್ಥಿತಿ ಇದೇ ಆಗಿದೆ. ನಾವೆಲ್ಲರೂ ಪಾಪ ಮಾಡಿ,ಪಾಪದಿಂದ ನಮ್ಮ ಸ್ವಭಾವಗಳಲ್ಲಿ ಪರಿವರ್ತನೆ ಹೊಂದಿ ಮತ್ತು ದೇವರೊಂದಿಗೆ ಸಮಾಧಾನ ಹೊಂದುವುದು ಅವಶ್ಯವಾಗಿದೆ. ಆತನ ರಾಜ್ಯಕ್ಕೆ ಅಂತ್ಯವಿಲ್ಲವೆಂದು ಯೇಸು ಕ್ರಿಸ್ತನನ್ನು ಉದ್ದೇಶಿಸಿ ದೇವರು ದಾವೀದನೊಂದಿಗೆ ಆತನ ಸಂತಾನದ ಮೂಲಕ ಒಬ್ಬರು ಸಿಂಹಾನದ ಮೇಲೆ ನೀತ್ಯಾವೂ ಕೂತುಕೊಂಡು ಆಳ್ವಿಕೆ ಮಾಡುತ್ತಾನೆ ಎಂದು ವಾಗ್ದಾನವನ್ನು ಹೇಳಿದನು.

ದಾವೀದನು ಮತ್ತು ಅಬ್ರಹಾಮನೊಂದಿಗೆ ದೇವರು ಮಾಡಿದ ವಾಗ್ದಾನವಾದ ಕ್ರಿಸ್ತನು, ಪಾಪವಿಲ್ಲದೆ ಮತ್ತು ದೇವರಿಗೆ ಒಳಪಟ್ಟವನಾಗಿ ನಮಗೋಸ್ಕರ ತನ ಜೀವವನ್ನು ಕೊಡುವುದಕ್ಕೆ ಇಷ್ಟಪಟ್ಟನು.

ಕ್ರಿಸ್ತನು ಪರಲೋಕದಿಂದ ಶರೀರದಾರಿಯಾಗಿ ಬಂದು,ಮನುಷ್ಯ ಕುಮಾರನಾಗಿ,ದೇವರಿಗೆ ಪರಿಶುದ್ಧನಾಗಿ ಜೀವಿಸಿ ದೇವರ ಸಂಕಲ್ಪವನ್ನು ಭೂಮಿಯ ಮೇಲೆ ನೆರವೇರಿಸುವುದಕ್ಕೆ ಆತನು ದಾವೀದ ಕಮಾರನಾಗಿ ಕರೆಯ್ಪಟ್ಟನು.

ಪ್ರಶ್ನೆಗಳು:

1. ಸೌಲನನ್ನು ದೇವರು ಇಸ್ರಾಯೇಲರಿಗೆ ಅರಸನನ್ನಾಗಿ ನೇಮಿಸಿದಕ್ಕೆ ದಾವೀದನು ಆತನನ್ನು ಹಾನಿ ಮಾಡುವುದಕ್ಕೆ ತಿರಸ್ಕರಿಸಿದನು ಮತ್ತು ಆತನಿಗೆ ಹಾನಿ ಮಾಡಿದರೆ ದೇವರನ್ನು ಅಗೌರವಪಡಿಸಿದಂತಾಗುವುದು ಎಂದು ಭಾವಿಸಿದನು.

A.ಸರಿ B.ತಪ್ಪು

2.ದೇವರ ಹೃದಯಾನು ಸಾರವಾದ ವ್ಯಕ್ತಿ ಅಂದರೆ.

A.ದೇವರ ನಿಯಮಗಳನ್ನು ಮತ್ತು ಆಜ್ಞೆಗಳನ್ನು ಭೋಧಿಸುವವನು

B.ದೇವರ ಪ್ರಜೆಗಳನ್ನು ನಡೆಸುವುದಕ್ಕೆ ಬಲವುಳ್ಳವನು

C.ಒಳ್ಳೆದನ್ನು ಮಾಡುವುದಕ್ಕೆ ಇಷ್ಟಪಟ್ಟು ಮತ್ತು ಆತನ ಪಾಪ ಕಾರ್ಯಗಳನ್ನು ಸರಿ ಮಾಡಿಕೊಳ್ಳುವವನು

3.ದಾವೀದನು ಇವುಗಳಲ್ಲಿ ನಮಗೆ ಒಂದು ಒಳ್ಳೆ ಉದಾಹರಣೆ

A.ಒಬ್ಬ ಬಲವುಳ್ಳ ಅರಸ

B.ಪಾಪವಿಲ್ಲದ ದಾವೀದನ ಕುಮಾರನು ಎಂದು ಯೇಸು ಕ್ರಿಸ್ತನ್ನು ಕರೆಯುವುದಕ್ಕೆ ಆತನು ಪಾಪ ಮಾಡಲಿಲ್ಲ

C.ಬೇಗ ಮಾರು ಮನಸ್ಸು ಹೊಂದಿ ಮತ್ತು ಆತನ ಪಾಪಗಳ ನಿಮಿತ್ತ ದೇವರಲ್ಲಿ ಕ್ಷಮಾಪಣೆ ಕೋರಿದನು

4.ದಾವೀದನ ಎಲ್ಲಾ ಕೆಲಸಗಳಲ್ಲಿಯೂ ದೇವರು ಸಂತೋಷ ಪಟ್ಟನು

A.ಸರಿ B.ತಪ್ಪು

**5.ಯೇಸು ಕ್ರಿಸ್ತನು ಭೂಲೋಕದಲ್ಲಿ ಜೀವಿಸುವಾಗ ತನ್ನನ್ನು ಯಾರ ಮಗನೆಂದು ತಿಳಿಯಪಡಿಸಿದನು**

**A.ದೇವರ ಮಗನು ಮತ್ತು ಮನುಷ್ಯಕುಮಾರನು**

**B.ಮರಿಯಳು ಮತ್ತು ಯೊಸೆಫನ ಮಗನು**

**C.ದಾವೀದ ಕುಮಾರನು**

***

## ಪ್ರವಚನಗಳು ನೆರವೇರುವುದು

### ಪಾಠ-10

ಪಿತೃಗಳ ಕಾಲದಲ್ಲಿ ದೇವರು ಆದಾಮ, ಅವ್ವಳು, ಅಬ್ರಹಾಮ, ಇಸಾಕ,ಮತ್ತು ಯಾಕೋಬರೊಂದಿಗೆ ನೇರವಾಗಿ ಮಾತನಾಡುತ್ತಿದ್ದನು.ಇಸ್ರಯೇಲ್ ಜನರೊಂದಿಗೆ ಮೋಶೆ ಯೆಹೋಶುವ ಮತ್ತು ನ್ಯಾಯಾಧಿಪತಿಗಳ ಮುಖಾಂತರ ಮಾತನಾಡುತ್ತಿದ್ದನು.ಸಮುವೇಲನ್ನು ನ್ಯಾಯಾಧೀಶನಾಗಿದ್ದಾಗ ಇಸ್ರಯೇಲರ ನಮಗೆ ರಾಜನುಬೇಕು ಎಂದು ಕೇಳಿಕೊಂಡಾಗ ದೇವರು ಅವರಿಗೆ ರಾಜನ್ನು ನೇಮಿಸಿದನು. ಈ ರಾಜರ ಆಳ್ವಿಕೆಯ ಕಾಲದಲ್ಲಿ ಕೆಲವು ಮನುಷ್ಯರೊಂದಿಗೆ ಮಾತನಾಡುತ್ತಿದ್ದನು. ಅವರನ್ನು ಪ್ರವಾದಿಗಳೆಂದು ಕರೆಯುತ್ತಿದ್ದರು. ಪ್ರವಾದಿಗಳೆಲ್ಲರೂ ದೇವರ ಸಂದೇಶವನ್ನು ಇಸ್ರಯೇಲ್ ಜನರಿಗೆ ತಿಳಿಸುತ್ತಿದ್ದರು ಆದರೆ ಬರಬೇಕಾದ ಮೆಸ್ಸಿಯಾನನ್ನು ಕುರಿತು ಕೆಲವು ಪ್ರವಾದಿಗಳು ಮಾತ್ರ ಪ್ರವಾದಿಸಿದರು ಆದರೆ ಅನೇಕ ಅನೇಕ ವರ್ಷಗಳ ನಂತರದ ಕಾಲದಲ್ಲಿ ಅನೇಕ ಪ್ರವಾದಿಗಳ ಮೂಲಕ ಅಂದರೆ ಸುಮಾರು 50ಕ್ಕಿಂತ ಹೆಚ್ಚಾಗಿ ಪ್ರವಚನಗಳು ಮೆಸ್ಸಿಯಾನನ್ನು ಕುರಿತು ಹೇಳಲ್ಪಟ್ಟಿವೆ. ಅವೆಲ್ಲವೂ ಯೇಸು ಕ್ರಿಸ್ತನ ಮೂಲಕ ನೆರವೇರಿಸಲ್ಪಟ್ಟಿವೆ. ಹೊಸ ಒಡಂಬಡಿಕೆಯಲ್ಲಿ ನೆರವೇರಿದ ಪ್ರವಚನಗಳಲ್ಲಿ ಕೆಲವುಗಳನ್ನು ಮಾತ್ರ ಈ ಕೆಳಗೆ ಕೂಡಲಾಗಿದೆ.

1.ಮಲಾಕಿ3:1:–"ಇಗೋ, ನನ್ನ ದೂತನನ್ನು ಕಳುಹಿಸುತ್ತೇನೆ, ಆತನು ನನ್ನ ಮುಂದೆ ದಾರಿಯನ್ನು ಸರಿ ಮಾಡುವನು; ನೀವು ಅಂಬಲಿಸುವ ಕರ್ತನು ತನ್ನ ಆಲಯಕ್ಕೆ ಬರುವನು;ಆಹಾ,ನಿನಗೆ ಇಷ್ಟನಾದ ಒಡಂಬಡಿಕೆ ದೂತನು ಐತರುತ್ತಾನೆ;ಇದು ಸೇನಾಧೀಶ್ವರನಾದ ಯೆಹೋವನ ನುಡಿ".

ಲೂಕ7:24,27:–"ಯೋಹಾನನ ದೂತರು ಹಿಂತಿರುಗಿ ಹೋಗಲು ಆತನು ಯೋಹಾನನ ವಿಷಯವಾಗಿ ಆ ಜನರ ಗುಂಪುಗಳಿಗೆ ಹೇಳತೊಡಗಿದ್ದೇನೆಂದರೆ–

ಇಗೋ, ನನ್ನ ದೂತನನ್ನು ನಿನ್ನ ಮುಂದೆ ಕಳುಹಿಸುತ್ತೇನೆ. ನೀನು ಹೋಗುವ ದಾರಿಯನ್ನು ಅವನು ನಿನ್ನ ಮುಂದೆ ಸರಿಮಾಡುವನು ಎಂದು ಯಾರ ವಿಷಯವಾಗಿ ಬರೆದದೆಯೋ ಆ ಪುರುಷನು ಇವನೇ".

2.ಆದಿ49:10:–"ರಾಜದಂಡವನ್ನು ಹಿಡಿಯತಕ್ಕವನು ಬರುವ ತನಕ ಆ ಡಂಡವು ಯೆಹೂದನ ಕೈಯಿಂದ ತಪ್ಪುವುದಿಲ್ಲ, ಮುದ್ರೆಕೋಲು ಅವನ ಪಾದಗಳ ಬಳಿಯಿಂದ ಕದಲುವುದಿಲ್ಲ; ಅವನಿಗೆ ಅನ್ಯ ಜನಗಳೂ ವಿಧೇಯರಾಗಿರುವರು".

ಲೂಕ3:3:–" ಇವನು ನಹಸ್ಸೋನನ ಮಗನು; ಇವನು ಅಮ್ಮಿನಾದಾಬನ ಮಗನು; ಇವನು ಆರ್ನೈಯನ ಮಗನು;ಇವನು ಎಸ್ರೋನನ ಮಗನು; ಇವನುಪೆರಸನ ಮಗನು; ಇವನು ಯೂದನ ಮಗನು".

3.ಯೆರೆಮಿಯಾ23:5:–" ಯಹೋವನು ಹೀಗನ್ನುತ್ತಾನೆ–ಇಗೋ, ನಾನು ಮುಂದಿನ ಕಾಲದಲ್ಲಿ ದಾವೀದನೆಂಬ ಮೂಲದಿಂದ ಸದ್ಧರ್ಮಿಯಾದ ಮೊಳಕೆಯನ್ನು ಚಿಗುರಿಸುವೆನು; ಅವನು ರಾಜನಾಗಿ ಆಳುತ್ತಾ ವಿವೇಕದೀಂದ ಕಾರ್ಯವನ್ನು ಸಾಧಿಸುತ್ತಾ ದೇಶದಲ್ಲಿ ನೀತಿ ನ್ಯಾಯಗಳನ್ನು ನಿರ್ವಹಿಸುವನು".

ಮತ್ತಾಯ1:1:–" ಯೇಸು ಕ್ರಿಸ್ತನ ವಂಶಾವಳಿಯು. ಆತನು ದಾವೀದನ ವಂಶದವನು. ದಾವೀದನು ಅಬ್ರಹಾಮನ ವಂಶದವನು".

4.ಯೆಶಾಯ7:14:–" ಇಗೋ,ಒಬ್ಬ ಕನ್ನಿಕೆಯು ಗರ್ಭಿಣಿಯಾಗಿ ಮಗನನ್ನು ಹಡೆದು ಅವನಿಗೆ ಇಮ್ಮಾನುವೇಲ್ ಎಂದು ಹೆಸರಿಡುವಳು".

ಮತ್ತಾಯ2:6:–" ಯೆಹೊದ ಸೀಮೆಯ ಬೇತ್ಲೆ ಹೇಮೇ,ಯೆಹೊದದ ಮುಖ್ಯ ಪಟ್ಟಣಗಳಲ್ಲಿ ನೀನು ಎಷ್ಟು ಮಾತ್ರವೂ ಸಣ್ಣದಲ್ಲ. ಒಬ್ಬ ಅಧಿಪತಿ ನಿನ್ನೊಳಗಿಂದಲೇ ಹೊರಡುವನು,ಆತನು ನನ್ನ ಪ್ರಜೆಯಾದ ಇಸ್ರಾಯೇಲನ್ನು ಆಳತಕ್ಕವನು ಎಂಬದಾಗಿ ಪ್ರವಾದಿಯ ಮುಖಾಂತರ ಬರೆದದೆ ಎಂದು ಹೇಳಿದರು.".

5.ಜಕ್ಕರ್ಯ9:9:–" ಚಿಯೋನ್ ನಗರಿಯೇ, ಬಹು ಸಂತೋಷಪಡು; ಯೆರೂಸಲೇಮ್ ಪುರಿಯೇ, ಹರ್ಷಧ್ವನಿಗೈ ! ನೋಡು, ನಿನ್ನ ಅರಸು ನಿನ್ನ ಬಳಿಗೆ ಬರುತ್ತಾನೆ; ಆತನು ನ್ಯಾಯವಂತನು,ಸುರಕ್ಷಿತನು;ಶಾಂತಗುಣವುಳ್ಳವನಾಗಿಯೂ ಕತ್ತೆಯನ್ನು ಹೌದು, ಪ್ರಯದ ಕತ್ತೆಮರಿಯನ್ನು ಹತ್ತಿದವನಾಗಿಯೂ ಬರುತ್ತಾನೆ".

ಮತ್ತಾಯ21:5–7:–" ಚೀಯೋನ್ ನಗರಿಗೆ– ನೋಡು,ನಿನ್ನ ಅರಸು ನಿನ್ನ ಬಳಿಗೆ ಬರುತ್ತಾನೆ; ಆತನು ಶಾಂತಗುಣವುಳ್ಳವನಾಗಿಯೂ ಕತ್ತೆಯನ್ನು,ಹೌದು ಪ್ರಾಯದ ಕತ್ತೆಯಮರಿಯನ್ನು ಹತ್ತಿದವನಾಗಿಯೂ ಬರುತ್ತಾನೆಂದು ಹೇಳಿರಿ ಎಂಬುದು. ಆಗ ಶಿಷ್ಯರು ಹೋಗಿ ಯೇಸು ತಮಗೆ ಅಪ್ಪಣೆ ಕೊಟ್ಟಂತೆಯೇ ಕತ್ತೆಯನ್ನೂ ಮರಿಯನ್ನೂ ರಂದು ಅವುಗಳ ಮೇಲೆ ತಮ್ಮ ಬಟ್ಟೆಗಳನ್ನು ಹಾಕಲು ಆತನು ಹತ್ತಿ ಕೂತುಕೊಂಡನು".

6.ಯಶಾಯ53:5:–" ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು; ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು; ಅಮಗೆ ಸುಕ್ಷೇಮವನ್ನು ಉಂಟುಮಾಡುವ ದಂಡನೆಯನ್ನು ಅವನು ಅನುಭವಿಸಿದನು; ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು".

ಮತ್ತಾಯ27:12–14:–" ಮಹಾ ಯಾಜಕರೂ ಹಿರಿಯರೂ ಆತನ ಮೇಲೆ ದೂರು ಹೇಳುತ್ತಿರುವಾಗ ಆತನು ಏನೂ ಉತ್ತರ ಕೊಡಲಿಲ್ಲ. ಅಗ ಪಿಲಾತನು ಆತನನ್ನು– ಇವರು ನಿನ್ನ ಮೆಲೆ ಎಷ್ಟು ಸಾಕ್ಷಿ ಹೇಳುತ್ತರೆ, ನೀನು ಕೇಳುವುದಿಲ್ಲವೂ? ಎಂದು ಕೇಳಿದನು. ಆತನು ಅವನಿಗೆ ಒಂದು ಮಾತಿಗಾದರೂ ಉತ್ತರ ಕೊಡಲಿಲ್ಲ ".

7.ಯಶಾಯ53:7:–" ಅವನು ಬಾಧೆಗೆ ಒಳಗಾಗಿ ತನ್ನನ್ನು ತಗ್ಗಿಸಿಕೊಂಡನು, ಬಾಯಿ ತೆರೆಯಲಿಲ್ಲ; ವಧ್ಯ ಸ್ಥಾನಕ್ಕೆ ಒಯ್ಯಲ್ಪಡುವ ಕುರಿಯಂತೆಯೂ ಉಣ್ಣೆ ಕತ್ತರಿಸುವವರ ಮುಂದೆ ಮೌನವಾಗಿರುವ ಕುರಿಯ ಹಾಗೂ ಇದ್ದನು, ಬಾಯಿ ತೆರೆಯಲೇ ಇಲ್ಲ".

ಮಾರ್ಕ15:4:–" ಮಹಾ ಯಾಜಕರು ಆತನ ಮೇಲೆ ತುಂಬಾ ದೂರು ಹೇಳುತ್ತಿದ್ದರು, ಆಗ ಪಿಲತನು ಇನ್ನೊಂದಾವರ್ತಿ ಆತನನ್ನು–ನೀನು ಏನೂ ಉತ್ತೆರಕೊಡುವುದಿಲ್ಲವೆ? ಇವರು ನಿನ್ನ ಮೇಲೆ ಎಷ್ಟು ದೂರು ಹೇಳುತ್ತಾರೆ ನೋಡು ಎಂದು ಕೇಳಿದನು. ಆದರೆ ಯೇಸು ಇನ್ನೇನೂ ಉತ್ತರ ಕೋಡಲಿಲ್ಲ. ಅದನ್ನು ನೋಡಿ ಪಿಲಾತನು ಆಶ್ಚರ್ಯಪಟ್ಟನು".

8.ಯೆಶಾಯ53:9:–" ಅವನು ಯಾವ ಅನ್ಯಾಯವನ್ನು ಮಾಡದಿದ್ದರೂ ಅವನ ಬಾಯಲ್ಲಿ ಯಾವ ವಂಚನೆಯು ಇಲ್ಲದಿದ್ದರೂ ಅವನು ಸತ್ತಾಗ ದುಷ್ಟರ ಮಧೆ ಪುಷ್ಟರ ನಡುವೆ ಅವನನ್ನು ಹೂಣಿಟ್ಟರು".

ಮತ್ತಾಯ27:57–58:–" ಸಂಜೆ ಯಾದಾಗ ಅರಿಮಥಾಯನು ಯೋಸೆಫನೆಮಬ ಒಬ್ಬ ದನವಂತನು ಬಂದನು; ಇವನು ಸಹ ಯೇಸುವಿನ ಶಿಷ್ಯನಾಗಿದ್ದನು. ಇವನು ಪಿಲಾತನ ಬಳಿಗೆ ಹೋಗಿ ಯೆಸುವಿನ ದೇಹವನ್ನು ತನಗೆ ಕೊಡಿಸಬೇಕೆಂದು ಬೇಡಿಕೊಳ್ಳಲಾಗಿ ಪಿಳತನು ಅದನ್ನು ಕೊಡಬಕೆಂದು ಅಪ್ಪಣೆಮಾಡಿದನು"

ಪ್ರಶ್ನೆಗಳು:

1. ವಿಮೋಚಕನನ್ನು ಕುರಿತಾದ ಯಾವ ಪ್ರವಚನಗಳು ಇಲ್ಲ.

A.ಸರಿ B.ತಪ್ಪು

2.ಮೆಸ್ಸಿಯಾನನ್ನು ಕುರಿತು ಯಶಾಯನು ಮಾತ್ರ ಪ್ರವಾದಿಸಿದನು.

A.ಸರಿ B.ತಪ್ಪು

3.ನಜರೇತಿನ ಯೇಸು ಕ್ರಿಸ್ತನಲ್ಲಿ ನೆರವೇರಿದ ಪ್ರವಾದನೆ ಇವುಗಳಲ್ಲಿ ಯಾವುದು.

A.ಮಲಾಕಿ6:10

B.ವಿಮೋಚನಕಾಂಡ10:15

C.ಯೆಶಾಯ53:5

D.ಯೆಶಾಯ2:19

4.ಆದಾಮ, ಅವ್ವಳು, ಅಬ್ರಹಾಮ ಮತ್ತು ದಾವೀದನೊಂದಿಗೆ ದೇವರು ನೇರವಾಗಿ ಮಾತನಾಡಿದನು.

A.ಸರಿ B.ತಪ್ಪು

5.ದೇವರು ಅರಸರ ಮೂಲಕ, ಪ್ರವಾದಿಗಳೊಂದಿಗೆ ತನ್ನ ಸಂದೇಶವನ್ನು ತಿಳಿಸುತ್ತಿದ್ದನು.

A.ಸರಿ B.ತಪ್ಪು

***

ಸಮಾಧಾನ ಸಂದೇಶ

ಬೈಬಲ್ ಕರಸ್ಪಾಂಡೆನ್ಸ್ ಕೋರ್ಸ್

'ಸಮಾಧಾನ ಸಂದೇಶ' ಎನ್ನುವ ಬೈಬಲ್ ಕರಸ್ಪಂಡೆನ್ಸ್ ಕೋರ್ಸ್‌ಗೆ ಸ್ವಾಗತ.

ದೇವರ ಸ್ವರೂಪದಲ್ಲಿ, ಹೋಲಿಕೆಯಲ್ಲಿ ಉಂಟುಮಾಡಲ್ಪಟ್ಟ ಮನುಷ್ಯರು ದೇವರ ಆಜ್ಞೆಗಳನ್ನು ಮೀರಿ ದೇವರ ಸ್ವರೂಪವನ್ನು ಕಳೆದುಕೊಂಡರು. ಎಲ್ಲಾ ಯುಗಗಳಲ್ಲಿಯೂ ಆ ಆಜ್ಞಾತಿಕ್ರಮವನ್ನು ಮುಂದುವರೆಸುತ್ತಿದ್ದಾನೆ.ಆದರೆ ದೇವರು ಮನುಷ್ಯರೆಲ್ಲರೂ ಪುನಃ ತನ್ನ ಸ್ವಭಾವನ್ನು ಹೊಂದಬೇಕೆಂದು ಆಪೇಕ್ಷಿಸುತ್ತಾ ತನ್ನೊಂದಿಗೆ ಸಮಾಧಾನ ಹೊಂದುವುದಕ್ಕೆ ತನ್ನ ಸಂದೇಶವನ್ನು ಗ್ರಂಥದಲ್ಲಿ(ಬೈಬಲ್) ತಿಳಿಯಪಡಿಸಿದ್ದಾನೆ ಆ ಸಮಾಧಾನ ಸಂದೇಶವನ್ನು ಹೇಳುವಂತ್ತದ್ದೇ ಈ ಕೋರ್ಸ್ ಇದರಲ್ಲಿ ಒಟ್ಟು 3ಭಾಗಗಳಾಗಿ 30ಪಾಠಗಳನ್ನೊಗೊಂಡಿರುತ್ತವೆ.

ಭಾಗ–1 ಪಾಠಗಳು 1–10 : ಕ್ರಿಸ್ತನು ಭೊಲೋಕ್ಕೆ ಬರುವುದಕ್ಕಿಂತ ಮೂದಲ ಕಾಲ

ಭಾಗ–2 ಪಾಠಗಳು 11–20 : ಕ್ರಿಸ್ತನು ಶರೀರ ದಾರಿಯಾಗಿ ಭೊಲೋಕದಲ್ಲಿರುವ ಕಾಲ

ಭಾಗ–3 ಪಾಠಗಳು 20–30 : ಕ್ರಿಸ್ತನು ಪರಲೋಕ್ಕೆ ಆರೋಹಣವಾದ ನಂತರದ ಕಾಲ

ಒಂದು ಭಾಗದಲ್ಲಿನ ಪಾಠಗಳನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ ಕಳುಹಿಸಬೇಕು ಪರಿಶೀಲಿಸಿ ನಿಮಗೆ ಬಂದ ಅಂಕ(ಗ್ರೇಡ್)ಗಳೊಂದಿಗೆ ಮುಂದಿನ ಭಾಗದ ಪಾಠಗಳನ್ನು ಕಳುಹಿಸಲಾಗುವುದು. ಮೂರು ಭಾಗಗಳನ್ನು ಪೂರ್ತಿ ಮಾಡಿದ ಮೇಲೆ ನಿಮಗೆ ಉಚಿತವಾಗಿ ಬೈಬಲ್ ಮತ್ತು ಪ್ರಮಾಣ ಪತ್ರ ವನ್ನು ಕೊಡಲಾಗುವುದು.

ಪೂರ್ತಿ ಮಾಡಿರುವ ಸರಿ ಉತ್ತರಗಳನ್ನು ಕಳುಹಿಸುವ ವಿಳಾಸ:–

ಸಹೋ,ಎಸ್.ಎಮ್. ವಿನಯ್ ಕುಮಾರ್, (ಡೈರೆಕ್ಟರ್)

ಬೈಬಲ್ ಕರಸ್ಪಂಡೆನ್ಸ್ ಕೋರ್ಸ್

ಚರ್ಚ್ ಬೀದಿ, ಚಂದ್ರಬಾಬು ನಗರ,ನಾಯ್ಡು ಪೇಟೆ–524126,

ನೆಲ್ಲೂರು ಜಿಲ್ಲೆ.ಆಂದ್ರ ಪ್ರದೇಶ,ಇಂಡಿಯಾ.

ಫೋನ್ ನಂ: 98858 45588,94944 73488.